ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 9
Pages - 28
₹ - 12
September - 2015




ವಸುದೇವಸುತಂ ದೇವಂ ಕಂಸ ಚಾಣೂರ ಮರ್ದನಂ
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ

ಉಮಾ ಸುತಂ ಶೋಕ ವಿನಾಶಕಾರಣಂ
ನಮಾಮಿ ವಿಘ್ನೇಶ್ವರ ಪಾದಪಂಕಜಂ

▶▶ ಸೌಹಾರ್ದ ಸಹಕಾರಿಗಳ ಸಂಖ್ಯೆ : 3320 ▶▶ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 835



> ಬಹುತೇಕ ರಾಜ್ಯಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳ/ ಮಹಾಮಂಡಳಗಳ ವಾರ್ಷಿಕ ಸಾಮಾನ್ಯ ಸಭೆಗಳಿಗೂ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೂ ಬಹಳ ವ್ಯತ್ಯಾಸವನ್ನು ಕಾಣಬಹುದಾಗಿದೆ.

## ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ : ಸಕ್ರಿಯ ಭಾಗವಹಿಸುವಿಕೆ, ಅರ್ಥಪೂರ್ಣ ಚರ್ಚೆ, ಸ್ವಾಗತಾರ್ಹ ನಿರ್ಣಯಗಳಿಗಾಗಿ ಸದಸ್ಯ ಸಹಕಾರಿಗಳಿಗೆ ಅಭಿನಂದನೆ

**ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಶ್ರೀ ಕೃಷ್ಣಜನ್ಮಾಷ್ಟಮಿ, ಗೌರಿ ಗಣೇಶ ಹಬ್ಬದ ಶುಭಾಷಯಗಳು.**

ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಅತ್ಯಂತ ಯಶಸ್ವಿಯಾಗಿ, ಸಂಭ್ರಮ ಹಾಗೂ ಸಡಗರದಿಂದ ನಡೆದಿರುವುದು, ಸದಸ್ಯ ಸಹಕಾರಿಗಳ ಸಕ್ರಿಯ ಭಾಗವಹಿಸುವಿಕೆ, ಎಲ್ಲಾ ಅಗತ್ಯ ವಿಷಯಗಳ ಬಗ್ಗೆ ಸುದೀರ್ಘವಾಗಿ, ಅರ್ಥಪೂರ್ಣವಾಗಿ ಚರ್ಚೆ ನಡೆದಿರುವುದು, ಸರ್ವಾನುಮತದ ನಿರ್ಣಯಗಳು ಸೌಹಾರ್ದ ಸಹಕಾರಿಗಳ ಪ್ರಜ್ಞಾವಂತಿಕೆ ಇದಕ್ಕೆ ಕಾರಣ ಎಂದು ನಾನು ಭಾವಿಸಿದ್ದೇನೆ.

ಬಹುತೇಕ ರಾಜ್ಯಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳ/ ಮಹಾಮಂಡಳಗಳ ವಾರ್ಷಿಕ ಸಾಮಾನ್ಯ ಸಭೆಗಳಿಗೂ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೂ ಬಹಳ ವ್ಯತ್ಯಾಸವನ್ನು ಕಾಣಬಹುದಾಗಿದೆ. ಬೇರೆ ಕಡೆಗಳಲ್ಲಿ ಸಾಮಾನ್ಯ ಸಭೆಗಳು ಉತ್ತಮವಾಗಿ ನಡೆಯುತ್ತವೆ. ಆದರೆ, ಈ ರೀತಿಯ ಸದಸ್ಯ ಸಹಕಾರಿಗಳ ಭಾಗವಹಿಸುವಿಕೆ, ಸುದೀರ್ಘ ಚರ್ಚೆಗಳು, ಸಂಭ್ರಮದ ವಾತಾವರಣ, ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಪಕ್ಷಿನೋಟ, ಸದಸ್ಯರುಗಳಿಗೆ ಮಾಹಿತಿ ಒದಗಿಸುವ ವ್ಯವಸ್ಥೆ, ಸದಸ್ಯರ ಬೇಡಿಕೆಗಳಿಗೆ ಸ್ಪಂದಿಸುವುದು, ಸಾಮಾನ್ಯ ಸಭೆಯ ಜೊತೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಉಪಯೋಗವೆನಿಸಬಹುದಾದ ವಿಷಯಗಳ ಬಗ್ಗೆ ಉಪನ್ಯಾಸ/ ಸಂವಾದ ಕಾರ್ಯಕ್ರಮಗಳು, ಸರಕಾರದ ಸಚಿವರುಗಳನ್ನು ಅಥವಾ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಮತ್ತು ಕೆಲವು ಗಣ್ಯರನ್ನು ಭಾಗವಹಿಸುವಂತೆ ಮಾಡುವುದು, ಸೌಹಾರ್ದ ಸಹಕಾರಿ ಚಳುವಳಿಯ ಚಟುವಟಿಕೆಗಳ ಹಾಗೂ ಪ್ರಗತಿಯ ಬಗ್ಗೆ ಮಾಹಿತಿ ನೀಡುವುದು, ಸಂಯುಕ್ತ ಸಹಕಾರಿಯ ಚಟುವಟಿಕೆಗಳ, ಸೌಹಾರ್ದ ಸಹಕಾರಿ ಸಂಸ್ಥೆಗಳ ಹಾಗೂ ವಿವಿಧ ಕಂಪನಿಗಳ ಉತ್ಪಾದನೆಗಳ ಪ್ರದರ್ಶಿನಿಗಳ ವ್ಯವಸ್ಥೆ, ಸೌಹಾರ್ದ ಸಹಕಾರಿ ಕ್ಷೇತ್ರದ ಸಕಾರಾತ್ಮಕ ಬೆಳವಣಿಗೆಯತ್ತ ಒತ್ತು ಕೊಡುವುದು ಸಂಯುಕ್ತ ಸಹಕಾರಿಯ ವಿಶೇಷತೆ. ಪ್ರತಿಯೊಂದು ಸಹಕಾರಿ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆ ಈ ರೀತಿ ಸಂಭ್ರಮದಿಂದ, ಸಡಗರದಿಂದ ಕೂಡಿ ಪರಿಣಾಮಕಾರಿಯಾಗಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

ಈ ಬಾರಿಯ ಸಾಮಾನ್ಯ ಸಭೆ ಒಂದು ಐತಿಹಾಸಿಕ ಮೈಲಿಗಲ್ಲು. ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ತೀರ್ಪುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ಸಂಯುಕ್ತ ಸಹಕಾರಿಯ ಬಹುದಿನದ ಕನಸು ನನಸಾಗಿದೆ. ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಸಹಕಾರಿ ಕ್ಷೇತ್ರದ ತೀರ್ಪುಗಳನ್ನು ಸಂಗ್ರಹಿಸಿ ಆಂಗ್ಲ ಭಾಷೆಯಲ್ಲಿ ಹಾಗೂ ಅವುಗಳ ಸಾರಾಂಶಗಳನ್ನು ಕನ್ನಡದಲ್ಲಿ ಪ್ರಕಟಿಸಿ, ಇಂತಹ ಬೃಹತ್ ಸಭೆಯಲ್ಲಿ ಸಹಕಾರಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರಿಂದ ಬಿಡುಗಡೆಯಾಗಿರುವುದು ಐತಿಹಾಸಿಕ ಕ್ರಮ. ಈ ಪ್ರಕಟಣೆಗಳನ್ನು ಬಿಡುಗಡೆ ಮಾಡುವ ಮುನ್ನ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಈ ತೀರ್ಪುಗಳನ್ನು ಸಂಗ್ರಹಿಸಲು ಮಾಡಿದ ಶ್ರಮ ಅಭಿನಂದನಾರ್ಹ. ಈ ತೀರ್ಪುಗಳಲ್ಲಿ ಪ್ರಮುಖವಾದವುಗಳ ಆಯ್ಕೆ ಮಾಡಿ, ಪರಿಶೀಲಿಸಿ, ಪ್ರಕಟಣೆಗೆ ಯೋಗ್ಯವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಹಾಗೂ ಅವುಗಳಿಗೆ ಮುನ್ನುಡಿಗಳನ್ನು ಬರೆದಿರುವ ಮಹನೀಯರಿಗೆ ಸಂಯುಕ್ತ ಸಹಕಾರಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಆಸಕ್ತಿಯಿಂದ ಭಾಗವಹಿಸಲು ರಾಜ್ಯದ ಮೂಲೆ ಮೂಲೆಗಳಿಂದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿರುವುದು ವಿಶೇಷ. ಸದಸ್ಯ ಸಹಕಾರಿಗಳ ಪ್ರತಿನಿಧಿಗಳ ಜೊತೆಗೆ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು, ಅಧಿಕಾರಿಗಳು ಸಹ ಅಧಿಕ ಸಂಖ್ಯೆಯಲ್ಲಿ ಬಹಳ ಆಸಕ್ತಿಯಿಂದ ಬರುತ್ತಾರೆ. ಆದರೆ, ಇವರು ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅವಕಾಶವಿಲ್ಲದಿರುವುದರಿಂದ ಉಳಿದಂತೆ ಬೇರೆ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ಒದಗಿಸಲಾಗುತ್ತದೆ.

ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯು ಯಶಸ್ವಿಯಾಗಿ ನಡೆಯಲು ಸದಸ್ಯ ಸಹಕಾರಿಗಳ ಪೂರ್ಣ ಸಹಭಾಗಿತ್ವ ಹಾಗೂ ಸಹಕಾರವೇ ಪ್ರಮುಖವಾದದ್ದು ಎಂದು ಭಾವಿಸಿದ್ದೇನೆ. ಈ ಯಶಸ್ಸು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸಲ್ಲುತ್ತದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತಾರನಾಗಿ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಮುಂಬರುವ ದಿನಗಳಲ್ಲಿಯೂ ಎಲ್ಲಾ ಸೌಹಾರ್ದ ಸಹಕಾರಿಗಳು ಸಂಪೂರ್ಣ ಬೆಂಬಲ ಹಾಗೂ ಪ್ರೋತ್ಸಾಹವನ್ನು ಅಪೇಕ್ಷಿಸುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವೆನಿಸುವ ಎಲ್ಲಾ ಹಂತಗಳಲ್ಲಿ ಮೊದಲು ಪ್ರಾಮಾಣಿಕ ಪ್ರಯತ್ನ. ಒಂದು ವೇಳೆ, ಪ್ರಯತ್ನ ಫಲಿಸದಿದ್ದರೆ ಹೋರಾಟಕ್ಕೆ ಸಂಯುಕ್ತ ಸಹಕಾರಿ ಸಿದ್ಧವಿದೆ. ಇದಕ್ಕಾಗಿ ನಿಮ್ಮೆಲ್ಲರ ಸಂಪೂರ್ಣ ಬೆಂಬಲವನ್ನು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು


## ಒಳ ಪುಟಗಳಲ್ಲಿ...


ಮೈಸೂರು ವಿಭಾಗೀಯ ಕಛೇರಿ ಉದ್ಘಾಟನೆ ಹಾಗೂ ಸಹಕಾರಿಗಳ ಸಮಾವೇಶ ..... 5

ಸೌಹಾರ್ದ ಸಹಕಾರಿಗಳ ಸ್ವಾಯತ್ತತೆ ಕಡಿವಾಣ ಹಾಕುವ ಪ್ರಯತ್ನ ಸರಕಾರ ಮಾಡುವುದಿಲ್ಲ. ಆದರೆ, ಸ್ವೇಚ್ಛಾಚಾರಕ್ಕೆ ಮಾತ್ರ ನಿಯಂತ್ರಣ – ಡಾ. ಮಹೇಂದ್ರ ಜೈನ್ ..... 8

ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ ..... 10

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ವಿಭಾಗೀಯ ಕಛೇರಿಯ ಪೂರ್ಣ ಉಪಯೋಗ ಮಾಡಿಕೊಳ್ಳಲು ಸೌಹಾರ್ದ ಸಹಕಾರಿಗಳಿಗೆ ಶ್ರೀ ಹೆಚ್.ವಿ. ರಾಜೀವ್ ಕರೆ ..... 12

ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ ..... 13

ಬೆಂಗಳೂರಿನ ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ, ವಿಭಾಗೀಯ ಕಛೇರಿಗಳಲ್ಲಿ ಹಾಗೂ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 69ನೇ ಸ್ವಾತಂತ್ರ್ಯ ದಿನದ ಆಚರಣೆ ..... 14

ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ..... 15

ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಇತರೆ ತೆರಿಗೆ ಕಾನೂನುಗಳ ಕುರಿತು ತರಬೇತಿ ಕಾರ್ಯಕ್ರಮ ..... 16

ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಕ್ರಮ ಹಾಗೂ ಸಂಪರ್ಕ ಸಭೆ ..... 17

ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ಇತರ ತೆರಿಗೆಗಳ ಕುರಿತು ತರಬೇತಿ ಕಾರ್ಯಕ್ರಮ ..... 18

ಶುಶೃತಿ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಬೆಂಗಳೂರು ..... 21

ನಿಮ್ಮ ಪ್ರಶ್ನೆ ನಮ್ಮ ಉತ್ತರ ..... 23

ಗ್ರಾಮೀಣ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರ ..... 24

ಸೌಹಾರ್ದ ಸಹಕಾರಿ – ಸಾಧನೆಯ ರೂವಾರಿ ..... 25

Stop Violence Against Women (VAW) ..... 26

RBI NEWS - AUGUST 2015 8 ▸▸ K.Vittal Shetty ..... 27


# ಸಂಪಾದಕೀಯ

## ಸ್ವಾಯತ್ತತೆಗೆ ಕಡಿವಾಣವಿಲ್ಲ; ಸ್ವೇಚ್ಛಾಚಾರಕ್ಕೆ ಅವಕಾಶವಾಗದಂತೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ನೀಡಿರುವ ಸಲಹೆ ಸ್ವಾಗತಾರ್ಹ

ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಬಿಡುಗಡೆ ಸಮಾರಂಭದ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯದ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಪರ ಮುಖ್ಯಕಾರ್ಯದರ್ಶಿ ಡಾ. ಮಹೇಂದ್ರ ಜೈನ್‌ರವರು ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಅವಲೋಕನ, ಪ್ರಗತಿಯ ಬಗ್ಗೆ ಪ್ರಶಂಸೆ, ಕಾರ್ಯಚಟುವಟಿಕೆಗಳ ಬಗ್ಗೆ ತೃಪ್ತಿ, ಇದಕ್ಕಾಗಿಯೇ ISO 9001–2008 ಪ್ರಮಾಣ ಪತ್ರ ಪಡೆದಿರುವುದಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದಿಯಾಗಿ ಈ ಕ್ರಮದಲ್ಲಿ ಭಾಗಿಯಾಗಿರುವ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಪೂರ್ವನಿಯೋಜಿತ ಕಾರ್ಯಕ್ರಮದಂತೆ ಸಂಯುಕ್ತ ಸಹಕಾರಿಯ ಪ್ರಕಟಣೆಗಳನ್ನು ಬಿಡುಗಡೆ ಮಾಡಿದ ನಂತರದಲ್ಲಿ ಅವರು ಮಾಡಿದ ಭಾಷಣದ ವಿಷಯಗಳಲ್ಲಿ ಗಮನಿಸಬೇಕಾದ ಅತ್ಯಂತ ಪ್ರಮುಖವಾದ ವಿಷಯ ಬಹುಶಃ ಸೌಹಾರ್ದ ಸಹಕಾರಿಗಳ ಸ್ವಾಯತ್ತತೆಯಿಂದಾಗಿಯೇ ಸೌಹಾರ್ದ ಸಹಕಾರಿ ಕ್ಷೇತ್ರ ಗಣನೀಯ ಸಾಧನೆ ಮಾಡಿದೆ ಎಂದು ನನಗನ್ನಿಸುತ್ತದೆ. ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ ಹಾಗೂ ವ್ಯವಹಾರಿಕ ಸ್ವಾತಂತ್ರ್ಯ ಅವಶ್ಯಕತೆಯನ್ನು ಕೇಂದ್ರ ಯೋಜನಾ ಆಯೋಗದವರು ಎಲ್ಲಾ ರಾಜ್ಯಗಳಿಗೆ ಸಲಹೆ ಮಾಡಿದ್ದಾರೆ. ಕರ್ನಾಟಕದಲ್ಲಿ ಸೌಹಾರ್ದ ಹೆಸರಿನಲ್ಲಿ ಈ ಕಾಯ್ದೆ ಕಳೆದ 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ದೇಶದ ಸ್ವಾಯತ್ತ ಸಹಕಾರಿ ವ್ಯವಸ್ಥೆಯಲ್ಲಿಯೇ ಅತ್ಯಂತ ಮಾದರಿ ಹಾಗೂ ಹೆಮ್ಮೆಯ ಮತ್ತು ಅನುಕರಣೀಯ ವಿಷಯ ಇದಾಗಿದೆ. ಆದ್ದರಿಂದ, ಈ ಕ್ಷೇತ್ರದ ಸ್ವಾಯತ್ತತೆಯನ್ನು ಕಡಿಮೆಗೊಳಿಸುವ ಪ್ರಯತ್ನವನ್ನು ಸರಕಾರಗಳು ಮಾಡಬಾರದು ಹಾಗೂ ನಮ್ಮ ಸರಕಾರ ಇದನ್ನು ಮಾಡುವುದಿಲ್ಲ ಎಂದು ಹೇಳಿರುವುದು ಸಹಕಾರಿಗಳಿಗೆ ಸಂತೋಷವನ್ನುಂಟು ಮಾಡಿದೆ. ಆದರೆ, ಅದರ ಜೊತೆಗೆ ಅವರು ಹೇಳಿದ ಮತ್ತೊಂದು ಮಾತು ಸ್ವಾಯತ್ತತೆಯನ್ನು ಸ್ವೇಚ್ಛಾಚಾರವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಬೇಡಿ. ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ. ಹಾಗಾಗದಿದ್ದರೆ ಸರ್ಕಾರ ಮಧ್ಯಪ್ರವೇಶ ಅನಿವಾರ್ಯವಾಗುತ್ತದೆ. ಇದನ್ನು ಸೌಹಾರ್ದ ಸಹಕಾರಿಗಳು ಗಮನಿಸಬೇಕು ಎಂದು ಹೇಳಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಾತ್ಮಕ ಬೆಳವಣಿಗೆಯ ದೃಷ್ಠಿಯಿಂದ ಸ್ವಾಗತಾರ್ಹ. ಸೌಹಾರ್ದ ಸಹಕಾರಿ ಕ್ಷೇತ್ರವನ್ನು ತಮ್ಮ ವೈಯಕ್ತಿಕ ಬೆಳವಣಿಗೆಗೆ ಸಾಧನವನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸುವ ಶಕ್ತಿಗಳಿಗೆ ಎಚ್ಚರಿಕೆಯ ಮಾತು ಇದಾಗಿದೆ.

ಸ್ವಾಯತ್ತತೆ, ಸ್ವೇಚ್ಛಾಚಾರವಾಗದಂತೆ ನಿಗಾವಹಿಸುವುದು ಸಂಯುಕ್ತ ಸಹಕಾರಿಯ ಕರ್ತವ್ಯದ ಜೊತೆಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಕರ್ತವ್ಯವೂ ಸಹ ಎಂಬಂತೆ ಎಲ್ಲಾ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ ಎಂಬುದು ಸಂಯುಕ್ತ ಸಹಕಾರಿಯ ನಿಲುವಾಗಿದೆ. ಈ ನಿಟ್ಟಿನಲ್ಲಿ ಇದುವರೆಗೆ ಸಲಹೆ, ಸಹಕಾರ ಹಾಗೂ ಪ್ರೋತ್ಸಾಹ ನೀಡುತ್ತಾ ಬಂದಿರುವ ಸರಕಾರ, ಮುಂಬರುವ ದಿನಗಳಲ್ಲೂ ಸರಕಾರದ ಬೆಂಬಲ ಹಾಗೂ ಪ್ರೋತ್ಸಾಹವನ್ನು ನಿರೀಕ್ಷಿಸುತ್ತದೆ. ಅದು ಲಭ್ಯವಾಗಲೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಹಕಾರವನ್ನು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

## ಬದುಕು

ಬದುಕು ಬಹಳ ಅಮೂಲ್ಯ. ನಾವೆಲ್ಲಾ ಅದನ್ನು ಪಡೆದು ಬಂದವರು. ವರುಷ ವರುಷಗಳ ಕಾಲ ಈ ಜಗತ್ತಿನಲ್ಲಿ ನಾವು ಬಾಳುತ್ತೇವೆ. ಬದುಕು ಎಂದರೇನು? ಒಬ್ಬೊಬ್ಬರಿಗೆ ಒಂದೊಂದು ರೀತಿ ಅನಿಸುತ್ತಿರುತ್ತದೆ. ಎಲ್ಲದರಲ್ಲೂ ನಾವು ಸಮಾನವಾಗಿರಲಿಕ್ಕಿಲ್ಲ. ಆದರೆ, ಬದುಕು ಮಾತ್ರ ಸಮಾನವಾಗಿದೆ. ನನಗೂ ಒಂದಿಷ್ಟು ಬದುಕು ಸಿಕ್ಕಿದೆ, ನಿಮಗೂ ಒಂದಿಷ್ಟು ಬದುಕು ಸಿಕ್ಕಿದೆ. ವರುಷ ವರುಷಗಳ ಕಾಲ ನಾವು ಈ ಬದುಕನ್ನು ನೆನೆಯುತ್ತಾ ಹೋಗುತ್ತೇವೆ. ಬದುಕಿನ ರೂಪ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಾ ಹೋಗುತ್ತದೆ. ಕೆಲವರ ಬದುಕಿನ ತುಂಬಾ ಚಿಂತೆಗಳು ಹರವಿಕೊಳ್ಳುತ್ತವೆ. ಕೆಲವರ ಬದುಕಿನ ತುಂಬಾ ಸುಖದ ಕ್ಷಣಗಳು ವ್ಯಾಪಿಸಿರುತ್ತವೆ. ಕೆಲವರ ಬದುಕು ಬರೀ ಸಂಘರ್ಷಗಳಲ್ಲಿಯೇ ಹೋಗಿ ಬಿಡುತ್ತದೆ. ಇನ್ನು ಕೆಲವರ ಬದುಕು ಶಾಂತ, ಪ್ರಶಾಂತ ಅದನ್ನು ಅನುಭವಿಸುವಲ್ಲಿ ಮರೆಯಾಗುತ್ತದೆ. ಇಂಥ ಬದುಕು ಏನು? ನಿಶ್ಚಿತವಾಗಿ ಅದಕ್ಕೆ ಏನಾದರೂ ಅರ್ಥವಿದೆಯೇ? ಉಳಿದುದೆಲ್ಲಾ ಆನಂತರದ್ದು. ಮನೆಮಾರು ಕಟ್ಟುವುದಾಗಲಿ, ಸಂಪತ್ತನ್ನು ಸಂಗ್ರಹಿಸುವುದಾಗಲಿ, ನಮ್ಮ ಹಲವಾರು ಇಚ್ಛೆಗಳನ್ನು ಪೂರೈಸುವುದಾಗಲಿ, ಅದೆಲ್ಲಾ ನಂತರದ ಪ್ರಶ್ನೆ. ಆದರೆ, ಬದುಕು ಎಂದರೇನು? ಎಂಬುದನ್ನು ಮರೆತು ಬಿಡುತ್ತೇವೆ.




ನಾವು ನೂರು ವರ್ಷ ಬದುಕುತ್ತೇವೆ. ಇಡೀ ಪ್ರಪಂಚವನ್ನೇ ಹಿಡಿದು ಬಿಟ್ಟೇವೆ ಅನ್ನುತ್ತೇವೆ. ಆದರೆ ಬದುಕು ಎಂದರೇನು? ಎಂಬುದು ಯಾರಿಗೂ ಗೊತ್ತಿಲ್ಲಾ! ಬದುಕನ್ನು ಅರ್ಥಮಾಡಿಕೊಳ್ಳದೆ ಬದುಕುತ್ತಿದ್ದೇವೆ. ಬದುಕಿನ ಅರ್ಥವನ್ನು ತಿಳಿದುಕೊಳ್ಳುವ ಪ್ರಯತ್ನಗಳನ್ನೂ ಮಾಡಿಲ್ಲಾ. ಅದನ್ನು ಕುರಿತು ಯೋಚಿಸುವಷ್ಟು ಸಮಯವು ನಮಗಿಲ್ಲ. ಆದರೂ... ಬದುಕುತ್ತಿದ್ದೇವೆ. 'ಬದುಕು' ಎಂದರೆ 'ಮಕರಂದ', ಬದುಕು ಎಂದರೆ 'ಸುಗಂಧದ ಅನುಭೂತಿ', ಬದುಕು ಎಂದರೆ 'ಸುಂದರ', ಬದುಕು ಎಂದರೆ 'ಅನುಭವಿಸೋದು', ಬದುಕು ಎಂದರೆ 'ಹರಿಯುವುದು', ಬದುಕು ಎಂದರೆ ನಗುನಗುತ ಸ್ವಚ್ಛಂದವಾಗಿ ಹರಿಯುವುದು, ಸುತ್ತಲ ಪರಿಸರವನ್ನು ಹಸಿರಾಗಿರಿಸುತ್ತಾ ಹರಿಯುವುದು, ಅವಿಶ್ರಾಂತವಾಗಿ ಹರಿಯುವುದು. ನಮ್ಮ ಬದುಕು ನದಿಯಂತಿರಬೇಕು, ಸದಾ ಹರಿಯುತ್ತಿರಬೇಕು. ಶರೀರ, ಬುದ್ಧಿ, ಮನಸ್ಸು ಹರಿಯಬೇಕು, ನಿಲ್ಲಬಾರದು. ಯಾವುದೇ ಭಾವನೆಗಳಿಗೆ ಸಿಕ್ಕಿ ಹಾಕಿಕೊಳ್ಳಬಾರದು.

ಒಂದೆಡೆ ನಿಲ್ಲಬಾರದು, ನಿಂತರೆ ಹೊಂಡವಾಗುತ್ತದೆ, ದುರ್ನಾತ ಬೀರುತ್ತದೆ, ಸ್ವಚ್ಛಂದತೆ ಇರುವುದಿಲ್ಲ. ಬದುಕಿನ ದಾರಿಯಲ್ಲಿ ಯಾವುದಕ್ಕೂ ಅಂಟಿಕೊಳ್ಳಬಾರದು. ಬದುಕಿನ ಗುರಿ ವಿಶಾಲವಾಗಿರಬೇಕು, ನೇರವಾಗಿರಬೇಕು. ನದಿಯು ಸಮುದ್ರದೆಡೆ ಸಾಗುವಂತೆ ನಮ್ಮ ಬದುಕಿನ ಗುರಿ ಇರಬೇಕು. ಆ ಮೂಲಕ ಬದುಕನ್ನು ಶ್ರೀಮಂತಗೊಳಿಸಿಕೊಳ್ಳಬೇಕು, ಸಾರ್ಥಕಪಡಿಸಿಕೊಳ್ಳಬೇಕು.

ನಮ್ಮ ಬದುಕನ್ನು ಕೆಡಿಸುವ ವಿಚಾರಗಳಿದ್ದರೆ ಅವುಗಳನ್ನೇಕೆ ಮನಸಿನಲ್ಲಿಟ್ಟುಕೊಳ್ಳಬೇಕು. ಅವುಗಳನ್ನು ಮರೆಯಬೇಕು. ಮರೆಯದಿದ್ದರೆ ನಮ್ಮ ಬದುಕು ಬಡವಾಗುತ್ತದೆ, ದುರ್ನಾತ ಬೀರುತ್ತದೆ. ಮರೆತರೆ ಬದುಕು ಶ್ರೀಮಂತವಾಗುತ್ತದೆ. ಸುಗಂಧ ಬೀರುತ್ತದೆ.

## ಶಾಸನಬದ್ಧ ಕರ್ತವ್ಯಗಳು

ಸೆಪ್ಟೆಂಬರ್ ಮಾಹೆಯಲ್ಲಿ ಸೌಹಾರ್ದ ಸಹಕಾರಿಗಳು ನಿರ್ವಹಸಲೇ ಬೇಕಾದ ಈ ಕೆಳಕಂಡ ಶಾಸನಬದ್ಧ ಕರ್ತವ್ಯಗಳನ್ನು ತಪ್ಪದೇ ನಿರ್ವಹಿಸಲು ಕ್ರಮವಿಡುವುದು.

- ಸೆಪ್ಟೆಂಬರ್ 25ರ ಒಳಗಾಗಿ ಸಾಮಾನ್ಯ ಸಭೆಯನ್ನು ಕಡ್ಡಾಯವಾಗಿ ನಡೆಸಬೇಕು. ಯಾವುದೇ ಮುಂದೂಡಿಕೆಗೆ ಅವಕಾಶವಿರುವುದಿಲ್ಲ.
- ಸೆಪ್ಟೆಂಬರ್ 30ರ ಒಳಗಾಗಿ ಕಾಯ್ದೆ ಕಲಂ 34ರಲ್ಲಿರುವ ಮಾಹಿತಿಗಳನ್ನು ನಿಬಂಧಕರಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕು. (ಬ್ಯಾಂಕುಗಳು RBI ಗೂ ಸಹ ಸಲ್ಲಿಸಬೇಕು)
- ಸೆಪ್ಟೆಂಬರ್ 30ರ ಒಳಗಾಗಿ ಸಂಯುಕ್ತ ಸಹಕಾರಿಯ ವಾರ್ಷಿಕ ಶುಲ್ಕವನ್ನು ತಮ್ಮ ಸಹಕಾರಿಯ ದುಡಿಯುವ ಬಂಡವಾಳದ ಆಧಾರದಲ್ಲಿ ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 38ರಂತೆ ಪಾವತಿಸಬೇಕು.
- ಸಾಮಾನ್ಯ ಸಭೆ ಮುಗಿದ 7 ದಿನಗಳ ಒಳಗಾಗಿ ಲೆಕ್ಕಪರಿ ಶೋಧಕರಿಗೆ ಸೌಹಾರ್ದ ನಿಯಮ 8 ಬಿ (8)ರಂತೆ ನೇಮಕಾತಿ ತಿಳುವಳಿಕೆ ಪತ್ರ ನೀಡಬೇಕು ಮತ್ತು ಸದರಿ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ, ಲೆಕ್ಕಪರಿಶೋಧನಾ ನಿರ್ದೇಶಕರಿಗೆ ತಿಳಿಸಬೇಕು.
- ಸೆಪ್ಟೆಂಬರ್ 01ರ ಒಳಗಾಗಿ ಕಾಯ್ದೆ ಕಲಂ 33 (8) ರಂತೆ ಸಂಯುಕ್ತ ಸಹಕಾರಿಗೆ, ನಿಬಂಧಕರಿಗೆ ಮತ್ತು ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಸಹಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸತಕ್ಕದ್ದು. ಇದುವರೆಗೆ ಸಲ್ಲಿಸಿರದ ಸಹಕಾರಿಗಳು ಸಲ್ಲಿಸಲು ತಕ್ಷಣ ಕ್ರಮವಿಡುವುದು.
- ಸಾಮಾನ್ಯ ಸಭೆ ನಡವಳಿ (ನಿಯಮ 6 ಸಿ (10)), ಲೆಕ್ಕಪರಿಶೋಧನಾ ವರದಿಗೆ (ಕಾಯ್ದೆ ಕಲಂ 33 (10)) ಅನುಪಾಲನಾ ವರದಿಯನ್ನು ಸಾಮಾನ್ಯ ಸಭೆ ನಡೆದ ದಿನಾಂಕದಿಂದ 30 ದಿನಗಳ ಒಳಗೆ ನಿಬಂಧಕರಿಗೆ, ಸಂಯುಕ್ತ ಸಹಕಾರಿಗೆ, ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಕಳುಹಿಸತಕ್ಕದ್ದು.
- ಸಾಮಾನ್ಯ ಸಭೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಕಾಯ್ದೆ ಕಲಂ 62ಎ (4)ರಂತೆ ಮತ್ತು ನಿಯಮ 10 ಎ ಯಂತೆ ಶಿಕ್ಷಣ ನಿಧಿ ವಂತಿಗೆಯನ್ನು ಸಂಯುಕ್ತ ಸಹಕಾರಿಗೆ ಪಾವತಿಸುವುದು.

# ಮೈಸೂರು ವಿಭಾಗೀಯ ಕಛೇರಿ ಉದ್ಘಾಟನೆ ಹಾಗೂ ಸಹಕಾರಿಗಳ ಸಮಾವೇಶ

**ಸಹಕಾರ ಕ್ಷೇತ್ರದಲ್ಲಿ ಸರಕಾರದ ಹಸ್ತಕ್ಷೇಪವಿಲ್ಲ. ಸಹಕಾರಿಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸುವ ಪ್ರಯತ್ನವಿಲ್ಲ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಕಾರ್ಯನಿರ್ವಹಣೆ ತೃಪ್ತಿಕರ. ಠೇವಣಿದಾರರ ವಿಶ್ವಾಸಾರ್ಹತೆ ಉಳಿಸಿಕೊಳ್ಳಲು ಹೆಚ್ಚು ಒತ್ತು ಕೊಡುವುದು ಅಗತ್ಯ. – ಶ್ರೀ ಹೆಚ್.ಎಸ್.ಮಹದೇವಪ್ರಸಾದ್, ಸಹಕಾರ ಸಚಿವರು**

**ಮೈಸೂರು :** ದಿನಾಂಕ 06.08.2015 ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಕಛೇರಿಯ ಉದ್ಘಾಟನೆ ಹಾಗೂ ಸಹಕಾರಿಗಳ ಸಮಾವೇಶವನ್ನು ಮೈಸೂರಿನ ಶಂಕರಮಠ ರಸ್ತೆಯಲ್ಲಿರುವ ನಟರಾಜ ಸಭಾಭವನದಲ್ಲಿ ರಾಜ್ಯದ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದ್‌ರವರು ಉದ್ಘಾಟಿಸಿ, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ತೃಪ್ತಿಕರವಾಗಿದೆ. ಈ ಕ್ಷೇತ್ರದಲ್ಲಿನ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗ ಹೆಚ್ಚಿಸುವಲ್ಲಿ ಉತ್ತಮ ಪಾತ್ರ ನಿರ್ವಹಿಸುತ್ತಿವೆ. ಸಹಸ್ರ ಸಹಸ್ರ ಯುವಕರಿಗೆ ಉದ್ಯೋಗ ನೀಡಿವೆ. ಈ ಕ್ಷೇತ್ರದ ಬೆಳವಣಿಗೆಯನ್ನು ಗಮನಿಸಿದ ಜನರು ವಾಣಿಜ್ಯ ಬ್ಯಾಂಕುಗಳನ್ನು ತೊರೆದು, ಸೌಹಾರ್ದ ಸಹಕಾರಿಗಳಲ್ಲಿ ಠೇವಣಿ ಇಡುತ್ತಿದ್ದಾರೆ. ಈ ಠೇವಣಿದಾರರ ವಿಶ್ವಾಸಾರ್ಹತೆಯನ್ನು ಕಾಯ್ದುಕೊಳ್ಳುವತ್ತ ಸೌಹಾರ್ದ ಸಹಕಾರಿಗಳು ಹೆಚ್ಚು ಗಮನ ಹರಿಸಬೇಕು ಎಂದು ತಿಳಿಸಿದರು.

ರಾಜ್ಯದ ಬೆಳಗಾವಿ, ಕಲಬುರಗಿ ಹಾಗೂ ಬೆಂಗಳೂರು ವಿಭಾಗಗಳಲ್ಲಿ ಈ ಸೌಹಾರ್ದ ಸಹಕಾರಿಗಳು ಸಂಖ್ಯಾ ದೃಷ್ಟಿಯಲ್ಲಿ ಹೆಚ್ಚು ಬೆಳೆದಿವೆ. ಮೈಸೂರು ವಿಭಾಗದಲ್ಲಿಯೂ ಈ ಬೆಳವಣಿಗೆ ಆಗಬೇಕು ಎಂದು ತಿಳಿಸುತ್ತಾ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ



ಒಂದು ಪ್ರತ್ಯೇಕ ನ್ಯಾಯಾಲಯವನ್ನು ಮಂಜೂರು ಮಾಡಲಾಗಿದೆ. ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳಲ್ಲಿ ಸರಕಾರದ ಹಸ್ತಕ್ಷೇಪಕ್ಕೆ ಅನಗತ್ಯವಾಗಿ ಅವಕಾಶ ಕೊಡುವುದಿಲ್ಲ. ಸಹಕಾರಿಗಳ ಸ್ವಾಯತ್ತತೆಯನ್ನು ಮೊಟಕುಗೊಳಿಸುವ ಪ್ರಯತ್ನವನ್ನು ಸರಕಾರ ಮಾಡುವುದಿಲ್ಲ, ಅಗತ್ಯವೆನಿದಾಗ ಮಾರ್ಗದರ್ಶನ ಮಾಡಲಾಗುತ್ತದೆ, ನೆರವು ನೀಡುತ್ತೇವೆ, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು.

## ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಸರಕಾರ ಹಾಗೂ ಸಹಕಾರಿಗಳ ಬದ್ಧತೆ ಅವಶ್ಯಕ – ಶ್ರೀ ಗುರುನಾಥ ಜಾಂತಿಕರ




ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದಲ್ಲಿ ಸಹಕಾರ ಕ್ಷೇತ್ರವನ್ನು ಪುನರ್ ರಚಿಸುವ, ಸಹಕಾರಿಗಳಿಗೆ ಸ್ವಾಯತ್ತತೆಯನ್ನು ವ್ಯವಹಾರಿಕ ಸ್ವಾತಂತ್ರ್ಯವನ್ನು ನೀಡುವ ದೃಷ್ಟಿಯಿಂದ ಕೇಂದ್ರ ಯೋಜನಾ ಆಯೋಗದವರ ಸಲಹೆಯಂತೆ ಶ್ರೀ ಅರ್ಧನಾರೀಶ್ವರನ್ ಸಮಿತಿಯ ವರದಿಯ ಆಧಾರದ ಮೇಲೆ ದೇಶದಾದ್ಯಂತ ಸ್ವಾಯತ್ತ ಮಾದರಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು ನೀಡಿದ ಸಲಹೆಯಂತೆ, ರಾಜ್ಯದಲ್ಲಿ ಹಲವು ಹಿರಿಯರ ಶ್ರಮದಿಂದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಿದೆ.



ಈ ಕಾಯ್ದೆಯ ಆಶಯಕ್ಕೆ ತಕ್ಕಂತೆ ಸಂಯುಕ್ತ ಸಹಕಾರಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುವುದು ಹಾಗೂ ಇದಕ್ಕೆ ಸರಕಾರದ ಪೂರ್ಣ ಬೆಂಬಲ ಅಗತ್ಯ ಎಂದು ತಿಳಿಸುತ್ತಾ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಸರಕಾರ ಹಾಗೂ ಸಹಕಾರಿಗಳ ಪ್ರಶಂಸೆಗೆ ಪಾತ್ರರಾಗುತ್ತಿರುವುದನ್ನು ಪ್ರಸ್ತಾಪಿಸಿ, ಈ ಗುಣಮಟ್ಟವನ್ನು ಕಾಯ್ದುಕೊಳ್ಳುವುದರ ಜೊತೆಗೆ ಅದನ್ನು ವೃದ್ಧಿಸುವಲ್ಲಿ ಸೌಹಾರ್ದ ಸಹಕಾರಿಗಳ ಸಹಕಾರವನ್ನು ಕೋರಿದರು.

## ISO 9001-2008 ಪ್ರಮಾಣ ಪತ್ರ ಸಂಯುಕ್ತ ಸಹಕಾರಿಯ ಉತ್ತಮ ಕಾರ್ಯನಿರ್ವಹಣೆಗೆ ಸಂದ ಪ್ರತಿಫಲ – ಶ್ರೀ ಹೆಚ್.ವಿ.ರಾಜೀವ್



ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗವನ್ನು ಗಮನಿಸಿ, ಸಂಯುಕ್ತ ಸಹಕಾರಿಯ ಪರಿಣಾಮಕಾರಿ ಕಾರ್ಯನಿರ್ವಹಣೆಯ ಅಗತ್ಯತೆಯ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಕಂದಾಯ ವಿಭಾಗಗಳಲ್ಲಿ ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಯನ್ನು ಪ್ರಾರಂಭಿಸಲಾಗಿದೆ.

ಪ್ರತಿ 3 ಜಿಲ್ಲೆಗೆ ಒಬ್ಬರಂತೆ ಸೌಹಾರ್ದ ಸಹಕಾರಿ ಅಭಿವೃದ್ಧಿ ಅಧಿಕಾರಿಯನ್ನು ನೇಮಕ ಮಾಡಲಾಗಿದೆ. ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳ ನಿರ್ವಹಣೆಯಲ್ಲಿ ಯಾವುದೇ ಲೋಪ ಅಥವಾ ವಿಳಂಬವಾಗದಂತೆ ಎಚ್ಚರವಹಿಸಿ ಕಾರ್ಯನಿರ್ವಹಿಸಲಾಗುತ್ತಿದೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಿದ ಅಂತರರಾಷ್ಟ್ರೀಯ ಗುಣಮಟ್ಟ ನಿರ್ವಹಣಾ ಸಂಸ್ಥೆಯವರು ಸಂಯುಕ್ತ ಸಹಕಾರಿಗೆ ISO 9001-2008 ಪ್ರಮಾಣ ಪತ್ರ ನೀಡಿರುವುದು, ಸಹಕಾರ ಕ್ಷೇತ್ರದಲ್ಲಿ ರಾಜ್ಯಮಟ್ಟದ ಸಂಸ್ಥೆಯೊಂದಕ್ಕೆ ಈ ಪ್ರಮಾಣ ಪತ್ರ ದೊರಕಿರುವುದು ಸಂತೋಷದ ಹಾಗೂ ಹೆಮ್ಮೆಯ ವಿಷಯ ಎಂದು ತಿಳಿಸಿದರು.



## ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬರುವಲ್ಲಿ ಹಿರಿಯ ಸಹಕಾರಿಗಳ ಪಾತ್ರ ಮಹತ್ವದ್ದು – ಶ್ರೀ ಕೊಂಕೋಡಿ ಪದ್ಮನಾಭ

ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಕಛೇರಿಯನ್ನು ಉದ್ಘಾಟಿಸಿದ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೊಂಕೋಡಿ ಪದ್ಮನಾಭರವರು ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಸ್ವಾಯತ್ತತೆ ಇಲ್ಲದೇ, ವ್ಯವಹಾರಿಕ ಸ್ವಾತಂತ್ರವಿಲ್ಲದೇ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದರ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ತರುವಲ್ಲಿ ರಾಜ್ಯದ ಹಿರಿಯ ಸಹಕಾರಿಗಳ ಪಾತ್ರ ಮಹತ್ವದ್ದು.

ಈಗ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭವಾಗಿ ಕಳೆದ 15 ವರ್ಷಗಳಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಹಾಗೂ ಈ ಕ್ಷೇತ್ರದ ನೇತೃತ್ವ ವಹಿಸಿಕೊಂಡಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸ್ವಾಗತಾರ್ಹ ಹಾಗೂ ಸಂತೋಷದಾಯಕ ಎಂದು ತಿಳಿಸಿದರು. ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಮೈಸೂರು ಹೊಸಮಠದ ಅಧ್ಯಕ್ಷರಾಗಿರುವ ನಿ.ಪ್ರ.ಸ್ವ ಶ್ರೀ ಚಿದಾನಂದ ಸ್ವಾಮೀಜಿಯವರು ವಹಿಸಿದ್ದರು.



ಸಹಕಾರ ಕ್ಷೇತ್ರದ ನಿವೃತ್ತ ಹಿರಿಯ ಅಧಿಕಾರಿಗಳಾದ ಶ್ರೀ ಸಿ.ಎನ್.ಪರಶಿವಮೂರ್ತಿ ಹಾಗೂ ಮ್ಯಾಮ್ಕೋ ಉಪಾಧ್ಯಕ್ಷರಾದ ಶ್ರೀ ಯಡೆಗೆರೆ ಸುಬ್ರಮಣ್ಯರವರಿಗೆ ಸನ್ಮಾನ.




ಮಾನ್ಯ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್‌ರವರಿಗೆ ಸನ್ಮಾನ.




ಹಿರಿಯ ಸಹಕಾರಿ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಕೊಂಕೋಡಿ ಪದ್ಮನಾಭ್‌ರವರಿಗೆ ಸನ್ಮಾನ.




ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರಿಗೆ ಸನ್ಮಾನ.




ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ರವರಿಗೆ ಸನ್ಮಾನ.

ಕಾರ್ಯಕ್ರಮದಲ್ಲಿ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್. ಮಹದೇವಪ್ರಸಾದ್, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರಿಗೆ ಮತ್ತು ಸಹಕಾರ ಕ್ಷೇತ್ರದ ಸಾಧಕರೆಂದು ಗುರುತಿಸಿ ಮಾಮ್ಕೋ ಉಪಾಧ್ಯಕ್ಷರಾದ ಶ್ರೀ ಯಡೆಗೆರೆ ಸುಬ್ರಮಣ್ಯ ಹಾಗೂ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿ ಇವರುಗಳನ್ನು ಸನ್ಮಾನಿಸಲಾಯಿತು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಂಡ್ಯ ಜಿಲ್ಲೆಯ ನಿರ್ದೇಶಕರಾದ ಶ್ರೀ ಎಸ್.ನಾಗರಾಜುರವರು ಸ್ವಾಗತ ಕೋರಿದರು.

ಚಾಮರಾಜನಗರ ಜಿಲ್ಲೆಯ ನಿರ್ದೇಶಕರಾದ ಶ್ರೀ ದಿನೇಶ ಗುಪ್ತಾರವರು ವಂದನಾರ್ಪಣೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು, ಸಹಕಾರ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಸಹಕಾರಿಗಳು ಹಾಗೂ ವಿಭಾಗದ ಎಲ್ಲಾ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ 600ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಹಕಾರಿ ತೀರ್ಪುಗಳು, ಸಾರಾಂಶ ಹಾಗೂ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳ ಪುಸ್ತಕಗಳ ಬಿಡುಗಡೆ, ISO 9001-2008 ಪ್ರಮಾಣ ಪತ್ರ ಸ್ವೀಕಾರ ಸಮಾರಂಭ.

## ಸೌಹಾರ್ದ ಸಹಕಾರಿಗಳ ಸ್ವಾಯತ್ತತೆ ಕಡಿವಾಣ ಹಾಕುವ ಪ್ರಯತ್ನ ಸರಕಾರ ಮಾಡುವುದಿಲ್ಲ. ಆದರೆ, ಸ್ವೇಚ್ಛಾಚಾರಕ್ಕೆ ಮಾತ್ರ ನಿಯಂತ್ರಣ – ಡಾ. ಮಹೇಂದ್ರ ಜೈನ್




ದಿನಾಂಕ : 20.08.2015 ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ಸಂಯುಕ್ತ ಸಹಕಾರಿಯ ಪ್ರಕಟಣೆಗಳ ಬಿಡುಗಡೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾದ ಡಾ. ಮಹೇಂದ್ರ ಜೈನ್‌ರವರು ಸಹಕಾರಿ ತೀರ್ಪುಗಳು, ಸಹಕಾರಿ ತೀರ್ಪುಗಳ ಸಾರಾಂಶ ಹಾಗೂ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳ ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಡಾ.ಮಹೇಂದ್ರ ಜೈನ್‌ರವರು ಈ ಪುಸ್ತಕಗಳು ಸಹಕಾರಿ ಸಂಸ್ಥೆಗಳಿಗೆ ಉಪಯುಕ್ತವಾಗಿವೆ. ಇದೊಂದು ಅತ್ಯಂತ ಮಹತ್ವದ ಕೆಲಸ. ಸಂಯುಕ್ತ ಸಹಕಾರಿಯು ಈ ರೀತಿ ಪ್ರಕಟಣೆಗಳನ್ನು ಪ್ರಕಟಿಸುವುದು ಸೌಹಾರ್ದ ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶನ ಮಾಡಿದಂತಾಗುತ್ತದೆ ಹಾಗೂ ಸಹಕಾರಿಗಳ ಕಾರ್ಯಚಟುವಟಿಕೆಗಳ ಸುಗಮ ನಿರ್ವಹಣೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ತೃಪ್ತಿಕರವಾಗಿದೆ. 3285 ವಿವಿಧ ರೀತಿಯ ಸೌಹಾರ್ದ ಸಹಕಾರಿಗಳಿವೆ. 1959ರ ಕಾಯ್ದೆಯ ಸಹಕಾರ ಸಂಘಗಳಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಾರಂಭದಿಂದಲೇ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿವೆ.

ದೇಶದ 9 ರಾಜ್ಯಗಳಲ್ಲಿರುವ ಈ ಸ್ವಾಯತ್ತ ಕಾಯ್ದೆಯ ಸಹಕಾರಿ ಸಂಸ್ಥೆಗಳಲ್ಲಿ ನಮ್ಮ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ, ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಸಂಸ್ಥೆಗಳು ದೇಶದಲ್ಲಿಯೇ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ISO 9001–2008 ಪ್ರಮಾಣ ಪತ್ರವನ್ನು ಪಡೆಯಲು ಸಾಧ್ಯವಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಈ ಪ್ರಮಾಣ ಪತ್ರವನ್ನು ಪಡೆದಿರುವ ಸಹಕಾರ ಸಂಸ್ಥೆಗಳು ಬಹಳ ಕಡಿಮೆ ಎಂದು ತಿಳಿಸಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರನ್ನು ಅಭಿನಂದಿಸಿದರು.

ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ನೀಡಿರುವ ಸ್ವಾಯತ್ತತೆಯಲ್ಲಿ ಕಡಿವಾಣ ಹಾಕುವ ಪ್ರಯತ್ನವನ್ನು ಸರಕಾರ ಮಾಡುವುದಿಲ್ಲ. ಆದರೆ, ಸೌಹಾರ್ದ ಸಹಕಾರಿಗಳು ಅಶಿಸ್ತಿನಿಂದ ಬೇಜವಾಬ್ದಾರಿಯುತವಾಗಿ ವರ್ತಿಸಿದಾಗ



ದಿವಂಗತ ಡಾ. ಎ.ಪಿ.ಜೆ.ಅಬ್ದುಲ್ ಕಲಾಂರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ



ಪುಸ್ತಕಗಳ ಬಿಡುಗಡೆ



ಐ.ಎಸ್.ಓ. ಪ್ರಮಾಣ ಪತ್ರ ಸ್ವೀಕಾರ

ಮಾತ್ರ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಸ್ವಾಗತ ಕೋರಿ, ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತಾ ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿಗಳ ತೊಂದರೆಗಳ ನಿವಾರಣೆಗಾಗಿ ಈ ರೀತಿ ವಿವಿಧ ವಿಷಯಗಳ ಪ್ರಕಟಣೆಗಳ ಅಗತ್ಯತೆಯ ಹಿನ್ನೆಲೆಯಲ್ಲಿ ಕಳೆದ ಹಲವು ವರ್ಷಗಳಿಂದ ಈ ರೀತಿ ಪ್ರಕಟಣೆಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಸಹಕಾರಿ ತೀರ್ಪುಗಳು, ಸಹಕಾರಿ ತೀರ್ಪುಗಳ ಸಾರಾಂಶ ಹಾಗೂ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳ ಪುಸ್ತಕಗಳು ಅತ್ಯಂತ ಬೇಡಿಕೆಯಲ್ಲಿದ್ದವು. ಹೀಗಾಗಿ, ಇವುಗಳ ಪ್ರಕಟಣೆಗಳನ್ನು ಮಾಡಲಾಗಿದೆ ಎಂದು ತಿಳಿಸಿದರು.

ಅಧ್ಯಕ್ಷೀಯ ಭಾಷಣವನ್ನು ಮಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿ ತೃಪ್ತಿಕರವಾಗಿದೆ. ಆದರೆ, ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಈ ನಿಟ್ಟಿನಲ್ಲಿ ಕಛೇರಿಯ ಎಲ್ಲಾ ಕಾರ್ಯಗಳನ್ನು ವ್ಯವಸ್ಥಿತವಾಗಿ ಮಾಡುವ ಹಾಗೂ ಪ್ರತಿಯೊಂದು ಕಾರ್ಯಕ್ರಮಗಳು ಕರಾರುವಕ್ಕಾಗಿ ನಡೆಯುವಂತೆ ಕ್ರಮವಿಡಲಾಗುತ್ತಿದೆ. ಗುಣಮಟ್ಟ ನಿರ್ವಹಣೆಗೆ ಅಗತ್ಯ ವ್ಯವಸ್ಥೆಗಳನ್ನು ಅಳವಡಿಸುತ್ತಿದೆ. ಹೀಗಾಗಿ, ISO 9001-2008 ಪ್ರಮಾಣ ಪತ್ರ ಪಡೆಯಲು ಸಾಧ್ಯವಾಗಿದೆ. ಸರಕಾರ ಸಂಯುಕ್ತ ಸಹಕಾರಿಯ ಎಲ್ಲಾ ಕಾರ್ಯಕ್ರಮಗಳನ್ನು ಹಾಗೂ ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ವ್ಯವಹಾರಿಕ ಸ್ವಾತಂತ್ರ್ಯವನ್ನು ಹಾಗೂ ಸ್ವಾಯತ್ತತೆಯನ್ನು ನೀಡಿ, ಪ್ರೋತ್ಸಾಹಿಸುತ್ತಾ ಬಂದಿದೆ. ಸರಕಾರ ಹಾಗೂ ಸಾರ್ವಜನಿಕರು ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಕರಿಸಿದಲ್ಲಿ, ಸೌಹಾರ್ದ ಸಹಕಾರಿ ಚಳುವಳಿಯ ವೇಗ ಇನ್ನೂ ಹೆಚ್ಚಿಗೆ ಆಗುವುದರಲ್ಲಿ ಸಂದೇಹವಿಲ್ಲ ಎಂದು ತಿಳಿಸಿದರು.

ISO 9001-2008 ಸಂಸ್ಥೆಯ ನಿರ್ದೇಶಕರಾದ ಶ್ರೀ ವಿಜಯ್, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಆನಂದ್‌ರವರು ಪ್ರಮಾಣ ಪತ್ರವನ್ನು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಮಹೇಂದ್ರ ಜೈನ್‌ರವರ ಮೂಲಕ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರಿಗೆ ಹಸ್ತಾಂತರಿಸಿದರು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ಎಲ್ಲಾ ನಿರ್ದೇಶಕರು ಸೇರಿದಂತೆ ಸಭಾಂಗಣದಲ್ಲಿ ಉಪಸ್ಥಿತರಿದ್ದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಂತೋಷದಿಂದ ಚಪ್ಪಾಳೆ ಬಾರಿಸಿ ಅಭಿನಂದಿಸಿದರು.

ಈ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು, ಅಧಿಕಾರಿಗಳು ಸಹಕಾರಿ ಗಣ್ಯರು ಸೇರಿದಂತೆ 800ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಂದನೆ ಸಲ್ಲಿಸಿದರು.




ಡಾ. ಮಹೇಂದ್ರ ಜೈನ್, ಐಎಎಸ್, ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನ.

### ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ

# ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಪರ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯ ಕಾರ್ಯಕ್ರಮಗಳಿಗೆ ಸೌಹಾರ್ದ ಸಹಕಾರಿಗಳ ಹರ್ಷ ಹಾಗೂ ಬೆಂಬಲ





ಸಂಯುಕ್ತ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ ದಿನಾಂಕ 20.08.2015 ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ಶ್ರೀ ರಾಮಾನುಜಂರವರ ಪ್ರಾರ್ಥನೆಯಾದ ನಂತರ, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಎಲ್ಲಾ ಸದಸ್ಯ ಪ್ರತಿನಿಧಿಗಳನ್ನು ಸ್ವಾಗತಿಸಿ, ಸಂಯುಕ್ತ ಸಹಕಾರಿಯ ನಿರ್ದೇಶಕರನ್ನು ಸಭೆಗೆ ಪರಿಚಯಿಸಿದರು.

ವಾರ್ಷಿಕ ಸಾಮಾನ್ಯ ಸಭೆ ಪ್ರಾರಂಭ ಪೂರ್ವದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರಿ ರವಿ ಯಲಿಗಾರರವರು ಕಾಶ್ಮೀರ ನೆರೆ ಸಂತ್ರಸ್ತರಿಗೆ, ಆತ್ಮ ಹತ್ಯೆಗೀಡಾದ ರೈತರಿಗೆ, ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಯೋಧರಿಗೆ, ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ, ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರ ಪತ್ನಿ ಶ್ರೀಮತಿ ಸುವ್ರ ಮುಖರ್ಜಿ, ಸಾಹಿತಿ ಕೈಯಾರ ಕಿಞ್ಞಣ್ಣ ರೈ, ಸಹಕಾರಿ ಧುರೀಣ ಶ್ರೀ ಶಾಂತಪ್ಪಣ್ಣ ಮಿರ್ಜಿ, ಬೆಂಕಿ ಮಹದೇವ, ಶ್ರೀ ಸುಭಾಶ್‌ರೆಡ್ಡಿ ಪಾಟೀಲ್ ಮತ್ತು ಇತ್ತೀಚೆಗೆ ಹಾಗೂ ಕಳೆದ ಸಾಲಿನಲ್ಲಿ ಮೃತರಾದ ಸಹಕಾರಿಗಳಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವ ಬಗ್ಗೆ ಸಭೆಗೆ ಸೂಚನೆ ನೀಡಿದರು. ಅದರಂತೆ, 2 ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ತಮ್ಮ ಅಧ್ಯಕ್ಷ ಭಾಷಣವನ್ನು ಮಾಡುತ್ತಾ ಸೌಹಾರ್ದ ಸಹಕಾರಿಗಳ ಬೆಳವಣಿಗೆ, ಸಂಯುಕ್ತ ಸಹಕಾರಿಯ ಕಾರ್ಯ – ವಿಭಾಗೀಯ ಕಛೇರಿಗಳು – ಸಿಬ್ಬಂದಿಯ ನೇಮಕಾತಿ, ಪತ್ರಿಕಾ ಗೋಷ್ಠಿಗಳು, ದೂರ ಶಿಕ್ಷಣದ ಮೂಲಕ ಸಹಕಾರ ಡಿಪ್ಲೋಮಾ ತರಬೇತಿ, ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮೌಲ್ಯಮಾಪನ : ಮೈಸೂರು ವಿಶ್ವವಿದ್ಯಾಲಯ, ಸಾಕ್ಷ ಚಿತ್ರ ನವೀಕರಣ, ನೇರ ತೆರಿಗೆ ಸಂಹಿತೆ, ಆದಾಯ ತೆರಿಗೆ ಇಲಾಖೆಯ ಕಿರುಕುಳ ಇತ್ಯಾದಿಗಳಿಗಾಗಿ ಕೇಂದ್ರ ಹಣಕಾಸು ಸಚಿವರ, ಕೃಷಿ ಸಚಿವರ ಹಾಗೂ ಕೇಂದ್ರ ವಾಣಿಜ್ಯ ಹಾಗೂ ಉದ್ದಿಮೆ ಸಚಿವರ ಮತ್ತು ಸಿ.ಬಿ.ಡಿ.ಟಿ. ಅಧ್ಯಕ್ಷರ ಭೇಟಿ, ಎನ್.ಸಿ.ಯು.ಐ., ಎನ್.ಸಿ.ಡಿ.ಸಿ. ಹಾಗೂ ನಬಾರ್ಡ್ ಸಂಸ್ಥೆಗಳಿಗೆ ಭೇಟಿ, ದೇಶದ ಮುಖ್ಯ ವಾಹಿನಿಯಲ್ಲಿ ಸೌಹಾರ್ದ ಸಹಕಾರಿ ವ್ಯವಸ್ಥೆಗೆ ಪ್ರಯತ್ನ, ಸೌಹಾರ್ದ ಸಹಕಾರಿಗಳಿಗೆ ಪ್ರತ್ಯೇಕ ನ್ಯಾಯಾಲಯ ಮಂಜೂರಾತಿ, ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ರಾಷ್ಟ್ರೀಯ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಚಂದ್ರಪಾಲಸಿಂಗ್ ಯಾದವ್‌ರವರ ಭೇಟಿ. ಸ್ವಂತ ಕಟ್ಟಡ/ನಿವೇಶನ, ಅಧ್ಯಯನ ಪ್ರವಾಸ, ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳು, ಕಾಮನ್ ಸಾಫ್ಟ್‌ವೇರ್ ಮತ್ತು ಏಕರೂಪ ಕಾರ್ಯವಿಧಾನಕ್ಕಾಗಿ ಕಾಮನ್ ಅರ್ಜಿಗಳ ನಮೂನೆಗಳ ಸಿದ್ಧತೆ, ಯುವ ಸಹಕಾರಿಗಳ ಸಂವಾದ ಕಾರ್ಯಕ್ರಮ : ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠ ಸ್ಥಾಪನೆ : ಸ್ಮಾರಕ ಉಪನ್ಯಾಸಗಳ ಚಿಂತನೆ, ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗೆ ಕ್ರಮ, ಅಧ್ಯಯನ ಯೋಗ್ಯ ಕ್ಷೇತ್ರವಾಗಿ ಸೌಹಾರ್ದ ಸಹಕಾರಿ ಕ್ಷೇತ್ರ, ಶಾಸನಬದ್ಧ ಕಾರ್ಯಗಳ ಜೊತೆಗೆ ಪರಿಣಾಮಕಾರಿ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳ ಶಿಸ್ತುಬದ್ಧ ನಿರ್ವಹಣೆಗಳ ಬಗ್ಗೆ ಮಾತನಾಡಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ ಸಹಕರಿಸಿದ ಪ್ರೋತ್ಸಾಹಿಸಿದವರಿಗೆಲ್ಲಾ ಹಾಗೂ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ನಂತರ ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ಸಾಮಾನ್ಯ ಸಭೆಯ ನೋಟೀಸನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ







ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಓದಿದರು. ಚಪ್ಪಾಳೆಯ ಮೂಲಕ ಅನುಮೋದಿಸಲಾಯಿತು. ನಂತರ ವಿಷಯ ಪಟ್ಟಿಯಂತೆ ವಿಷಯಗಳ ಮಂಡನೆ, ಚರ್ಚೆ ಹಾಗೂ ಸರ್ವಾನುಮತದ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕೊನೆಯಲ್ಲಿ, ಸಂಯುಕ್ತ ಸಹಕಾರಿಯ ನಿರ್ದೇಶಕಿಯಾದ ಶ್ರೀಮತಿ ಮಂಜುಳಾ ಪಾಟೀಲರವರು ವಂದನಾರ್ಪಣೆ ಸಲ್ಲಿಸಿದರು.

ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಶಿವರುದ್ರಪ್ಪನವರು ನಿರೂಪಣೆ ಮಾಡಿದರು. ರಾಜ್ಯದ 690 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದರು.

## ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961 ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 ಕುರಿತು ಸಂವಾದ ಕಾರ್ಯಕ್ರಮ




ಸೌಹಾರ್ದ ಸಹಕಾರಿಗಳು ವ್ಯವಸಾಯಕ್ಕೆ ಸಾಲ ನೀಡುವ ಸಂಸ್ಥೆಗಳಲ್ಲ. ವ್ಯಾಪಾರ, ವಹಿವಾಟು, ವಾಹನ ಮತ್ತು ವೈಯಕ್ತಿಕ ಮತ್ತು ಚಿಲ್ಲರೆ ಸಾಲಗಳನ್ನು ಮಾತ್ರ ಸೌಹಾರ್ದ ಸಹಕಾರಿಗಳು ನೀಡುತ್ತವೆ. ಸೌಹಾರ್ದ ಸಹಕಾರಿಗಳು ಈ ಎರಡೂ ಕಾನೂನುಗಳ ವ್ಯಾಪ್ತಿಗೆ ಒಳಪಡುವುದಿಲ್ಲ. ಅವಶ್ಯಕತೆ ಕಂಡು ಬಂದಲ್ಲಿ ಸಹಕಾರ ಇಲಾಖೆಯಿಂದ ಸ್ಪಷ್ಟೀಕರಣ ನೀಡಲಾಗುವುದು. ಸೌಹಾರ್ದ ಸಹಕಾರಿಗಳು ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳುವಳಿಕೆ ಮಾಡುವುದು ಅಗತ್ಯ.

ರಾಜ್ಯದಲ್ಲಿ ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ರಾಜ್ಯ ಸರಕಾರವು ರೈತರ ಸಾಲ ವಸೂಲಿ ಕ್ರಮವನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದರ ಜೊತೆಗೆ ವಸೂಲಿ ಕ್ರಮಗಳನ್ನು ಜಾರಿ ಮಾಡುವವರ ಮೇಲೆ ಕಾನೂನು ಕ್ರಮ ಜರುಗಿಸುತ್ತಿರುವುದರಿಂದ ಈ ಕಾಯ್ದೆಯ ಸ್ವರೂಪ, ವ್ಯಾಪ್ತಿ, ಅನುಷ್ಠಾನ ಮತ್ತು ಸೌಹಾರ್ದ ಸಹಕಾರಿಗಳಿಗೆ ಇದು ಅನ್ವಯವಾಗುವಿಕೆ ಮುಂತಾದ ವಿಷಯಗಳ ಬಗ್ಗೆ ಅನೇಕ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಲ್ಲಿರುವ ಆತಂಕಗಳ ನಿವಾರಣೆಗಾಗಿ ಸಂಯುಕ್ತ ಸಹಕಾರಿಯು ಸಂವಾದ ಕಾರ್ಯಕ್ರಮವನ್ನು ದಿನಾಂಕ : 20.08.2015ರಂದು ಸಾಮಾನ್ಯ ಸಭೆಯ ನಂತರದಲ್ಲಿ ಮಧ್ಯಾಹ್ನ 3.00 ಗಂಟೆಗೆ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಸಹಕಾರ ಇಲಾಖೆಯ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್.ನಾಗರಾಜಯ್ಯನವರು, ಹೈಕೋರ್ಟ್ ನ್ಯಾಯವಾದಿ ಶ್ರೀ ಪಿ.ಎನ್.ನಂಜಾರೆಡ್ಡಿಯವರು, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥರವರು ಮತ್ತು ಸಂವಾದಕಾರರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಕಾರ್ಯನಿರ್ವಹಿಸಿದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಸ್ವಾಗತ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ 400ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಕೊನೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ವಂದಿಸಿದರು.

# ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ವಿಭಾಗೀಯ ಕಛೇರಿಯ ಪೂರ್ಣ ಉಪಯೋಗ ಮಾಡಿಕೊಳ್ಳಲು ಸೌಹಾರ್ದ ಸಹಕಾರಿಗಳಿಗೆ ಶ್ರೀ ಹೆಚ್.ವಿ. ರಾಜೀವ್ ಕರೆ



## ಮೈಸೂರು ವಿಭಾಗೀಯ ಕಛೇರಿಯ ಉದ್ಘಾಟನೆ ಮತ್ತು ಸಹಕಾರಿಗಳ ಯಶ್ವಸಿ ಸಮಾವೇಶ : ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯ ನಿರ್ವಾಹಕರಿಗೆ ಅಭಿನಂದನಾ ಸಭೆ

ದಿನಾಂಕ : 12–08–2015 ರಂದು ಮೈಸೂರು ವಿಭಾಗೀಯ ಕಛೇರಿಯಲ್ಲಿ ಮೈಸೂರು ನಗರದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗೆ ಮೈಸೂರು ವಿಭಾಗೀಯ ಕಛೇರಿಯ ಉದ್ಘಾಟನೆ ಮತ್ತು ಸಹಕಾರಿಗಳ ಸಮಾವೇಶ ಯಶಸ್ವಿಯಾದ ಪ್ರಯುಕ್ತ ಅಭಿನಂದನಾ ಸಭೆಯನ್ನು ಏರ್ಪಡಿಸಲಾಗಿತ್ತು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ರವರು ವಹಿಸಿ, ಮೈಸೂರು ವಿಭಾಗಕ್ಕೆ ಒಳಪಡುವ ಎಲ್ಲಾ ಜಿಲ್ಲೆಗಳ ಸೌಹಾರ್ದ ಸಹಕಾರಿಗಳು ಇನ್ನೂ ಮುಂದೆ ತಮ್ಮ ಸಮಸ್ಯೆಗಳಿಗೆ, ಸಂದೇಹಗಳಿಗೆ ಮತ್ತು ಮಾಹಿತಿಗಾಗಿ ಬೆಂಗಳೂರಿಗೆ ಹೋಗುವ ಅವಶ್ಯಕತೆಯಿಲ್ಲ, ತಮಗೆ ಬೇಕಾದ ಎಲ್ಲಾ ನೆರವು ಮತ್ತು ಮಾಹಿತಿಯನ್ನು ಮೈಸೂರು ವಿಭಾಗೀಯ ಕಛೇರಿಯಲ್ಲಿ ಪಡೆದುಕೊಂಡು, ಇನ್ನು ಹೆಚ್ಚು–ಹೆಚ್ಚು ಸೌಹಾರ್ದ ಸಹಕಾರಿಗಳನ್ನು ಹುಟ್ಟುಹಾಕಿ, ಈ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಇನ್ನೂ ಉನ್ನತ ಮಟ್ಟಕ್ಕೆ ನೀವೆಲ್ಲರೂ ಕೊಂಡಯ್ಯಬೇಕು ಎಂದು ಕರೆ ನೀಡಿದರು.

ನಂತರ ಸಮಾವೇಶ ಯಶಸ್ವಿಗೊಳ್ಳಲು ಕಾರಣಕರ್ತರಾದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಈ ಸಭೆಗೆ 27 ಸೌಹಾರ್ದ ಸಹಕಾರಿಗಳಿಂದ 48 ಜನ ಪ್ರತಿನಿಧಿಗಳು ಹಾಜರಿದ್ದರು.

## ಸೌಹಾರ್ದ ಸಹಕಾರಿ ನಿರ್ದೇಶಕರ ಅಧ್ಯಯನ ಪ್ರವಾಸ

ಅಕ್ಟೋಬರ್ 2 ರಿಂದ ಅಕ್ಟೋಬರ್ 8 ರವರೆಗೆ 7 ದಿನಗಳ 2ನೇ ತಂಡದ ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳ ಅಧ್ಯಯನ ಪ್ರವಾಸ. ಒಬ್ಬರಿಗೆ ರೂ. 13,000/–. 3ನೇ ತಂಡದ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಅಧ್ಯಯನ ಪ್ರವಾಸ. ಒಬ್ಬರಿಗೆ ರೂ.13,000/–. ಎರಡೂ ತಂಡಗಳಲ್ಲಿ ಕೇವಲ 30 ಜನರಿಗೆ ಮಾತ್ರ ಅವಕಾಶ. ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಬಹುದಾಗಿದೆ. ಪ್ರತಿನಿಧಿಗಳು ಪೂರ್ಣಪ್ರಮಾಣದಲ್ಲಿ ನೋಂದಣಿಯಾದ ನಂತರ ಪ್ರವಾಸದ ವಿವರಗಳನ್ನು ತಿಳಿಸಲಾಗುವುದು.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ನ್ಯಾಷನಲ್ ಕೌನ್ಸಿಲ್ ಫಾರ್ ಕೋ–ಆಪರೇಟಿವ್ ಟ್ರೈನಿಂಗ್ ಸಂಸ್ಥೆಯ ಡೈರೆಕ್ಟರ್ ಜನರಲ್ ಆದ ಡಾ॥ ದಿನೇಶ್ ರವರು ಭೇಟಿ ನೀಡಿದ್ದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರಿಂದ ಸ್ವಾಗತ. ಈ ಸಂದರ್ಭದಲ್ಲಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇದರ ಪ್ರಾದೇಶಿಕ ನಿರ್ದೇಶಕರಾದ ಶ್ರೀ ವಸಂತ ನಾಯಕ್ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ



ಸಂಯುಕ್ತ ಸಹಕಾರಿ ವತಿಯಿಂದ ದಿನಾಂಕ : 07 ಮತ್ತು 08 ಜುಲೈ 2015 ರಂದು ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ ಎರಡು ದಿನಗಳ 'ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ'ವನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರಾಯಚೂರು ಜಿಲ್ಲೆಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲರವರು ಜ್ಯೋತಿ ಬೆಳಗಿಸುವ ಮೂಲಕ ನೆರವೇರಿಸಿ, ಮಹಿಳೆಯರಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದುವುದಕ್ಕಾಗಿ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಅವಕಾಶಗಳನ್ನು ಉಪಯೋಗಿಸಿಕೊಳ್ಳುವ ಜ್ಞಾನದ ಹಾಗೂ ಅನುಭವದ ಅಗತ್ಯತೆ ಇರುತ್ತದೆ. ಈ ಜ್ಞಾನ ಸಂಪಾದನೆಗಾಗಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯ ವತಿಯಿಂದ ಏರ್ಪಡಿಸಿರುವುದಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ 2 ದಿನಗಳ ಈ ತರಬೇತಿ ಕಾರ್ಯಕ್ರಮಕ್ಕೆ ಶುಭಕೋರಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ, ನಮ್ಮ ಸೌಹಾರ್ದ ಕಾಯ್ದೆ 15 ವರ್ಷಗಳ ಇತಿಹಾಸ ಹೊಂದಿದ್ದು, ಮಹಿಳಾ ಸೌಹಾರ್ದಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಹೆಚ್ಚಿನ ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ ಸ್ವಾವಲಂಬನೆಗೆ ಸೌಹಾರ್ದ ಸಹಕಾರಿಯು ಕಾರಣವಾಗಿದೆ. 12ನೇ ಶತಮಾನದಲ್ಲಿ ಅನೇಕ ಶರಣೆಯರು ಸಮಾಜ ಸುಧಾರಣೆಯಲ್ಲಿ ತಮ್ಮ ಮಹತ್ವದ ಪಾತ್ರ ವಹಿಸಿರುತ್ತಾರೆ.

ರಾಜಕೀಯ ಕ್ಷೇತ್ರದಲ್ಲಿ ಅನೇಕ ಮಹಿಳೆಯರು ಪುರುಷರಿಗೆ ಮೀರಿ ಸಾಧನೆ ಮಾಡಿರುತ್ತಾರೆ. ಅದರ ಫಲವಾಗಿ ಇಂದು ಅನೇಕ ರಾಜ್ಯಗಳಲ್ಲಿ ಮುಖ್ಯ ಮಂತ್ರಿಯಾಗಿ ಹಾಗೂ ಕೇಂದ್ರ ಸಚಿವೆಯರಾಗಿ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಹಾಗೂ ಉಳಿಸುವ ಮಹತ್ವದ ಜವಾಬ್ದಾರಿ ಮಹಿಳೆಯರ ಮೇಲಿದೆ ಎಂದರು.

ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀಮತಿ ಕೃತಿ ಜನಾರ್ಧನ್‌ರವರು ಸ್ವಾಗತಿಸಿದರು. ಕಿರಿಯ ಅಧಿಕಾರಿಯಾದ ಶ್ರೀಮತಿ ಸವಿತಾರವರು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇದರ ಪ್ರಾದೇಶಿಕ ನಿರ್ದೇಶಕರಾದ ಶ್ರೀ ವಸಂತ ನಾಯಕ್‌ರವರು ಉಪಸ್ಥಿತರಿದ್ದರು. ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಿ.ಎ.ಮಹದೇವಪ್ಪ ಅವರು 'ಸಹಕಾರಿ ಸಂಸ್ಥೆಗಳಲ್ಲಿ ಗುಣಮಟ್ಟ ನಿರ್ವಹಣೆ, ವ್ಯಾಪಾರ ಅಭಿವೃದ್ಧಿ ಯೋಜನೆ ಹಾಗೂ ಆಂತರಿಕ ಸಂಬಂಧಗಳ ನಿರ್ವಹಣೆ' ವಿಷಯದ ಕುರಿತು ತರಬೇತಿ ನೀಡಿದರು.

ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ವಿಜಯ ಕುಮಾರಿ, ನಿರೀಕ್ಷಕರು, ಮಹಿಳಾ ಅಭಿವೃದ್ಧಿ ನಿಗಮ, ಇವರು ಮಾತನಾಡಿ ಕರ್ನಾಟಕ ಸರ್ಕಾರವು ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಇದರ ಉಪಯೋಗ ಪಡೆದುಕೊಳ್ಳಲು ಸಲಹೆ ನೀಡಿದರು.

ತರಬೇತಿಯ ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗಹಿಸಿದ ಸಹಕಾರ ಇಲಾಖೆಯ ನಿಬಂಧಕರ ಕಛೇರಿಯ ಪತ್ರಾಂಕಿತ ಸಹಾಯಕರಾದ ಶ್ರೀಮತಿ ಗೀತಾ ಕರುಣಾಕರ ಬಾಬುರವರು ಮಹಿಳಾ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಸರ್ಕಾರದ ಪಾತ್ರದ ಕುರಿತು ವಿವರಿಸಿದರು. ಶ್ರೀಮತಿ ರಾಜೇಶ್ವರಿ ಸ್ವಾಮಿಯವರು ವಿವಿಧ ರೀತಿಯ ಗೃಹ ಉಪಯೋಗಿ ವಸ್ತುಗಳ ಬಗ್ಗೆ ಪ್ರಾಯೋಗಿಕ ನಡೆಸಿಕೊಟ್ಟರು. ಶ್ರೀಮತಿ ಮೀನಾಕ್ಷಿ ಖನ್ನಿಮಠ್, ಮಾನ್ಯ ಪ್ರಾಧ್ಯಪಕರು, ರಾಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ "ಆರ್ಥಿಕ ಅಭಿವೃದ್ಧಿಯಲ್ಲಿ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ" ವಿಷಯದ ಕುರಿತು ಉಪನ್ಯಾಸ ನೀಡಿದರು.

ಶ್ರೀಮತಿ ಹೇಮಲತಾ ಮಹಿಷಿ, ಮಾನ್ಯ ನ್ಯಾಯವಾದಿಗಳು, ಬೆಂಗಳೂರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ "ಮಹಿಳಾ ಸಹಕಾರಿಗಳು ತಿಳಿಯಬೇಕಾದ ವಿವಿಧ ಕಾನೂನುಗಳ ಮುಖ್ಯಾಂಶಗಳು" ವಿಷಯದ ಕುರಿತು ಉಪನ್ಯಾಸ ನೀಡಿದರು.

"ಮಹಿಳಾ ಸಬಲೀಕರಣ" ಕುರಿತು ಸಂವಾದ ಕಾರ್ಯಕ್ರಮದಲ್ಲಿ





ಶ್ರೀಮತಿ ಹೆಚ್.ಜಿ.ಶೋಭ, ಸ್ತ್ರೀ ಜಾಗೃತಿ ಪತ್ರಿಕೆಯ ಸಂಪಾದಕರು, ಶ್ರೀಮತಿ ಸುಮನ್ ಹೆಗಡೆ, ವಕೀಲರು ಹಾಗೂ ಸದಸ್ಯರು ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು, ಶ್ರೀಮತಿ ಹೋಮಿಗಾ, ಪ್ರಾಧ್ಯಾಪಕರು, ಆರ್.ಐ.ಸಿ.ಎಂ., ಬೆಂಗಳೂರು, ಶ್ರೀಮತಿ ಮಂಜುಳಾ ಪಾಟೀಲ, ನಿರ್ದೇಶಕರು, ಸಂಯುಕ್ತ ಸಹಕಾರಿ, ಶ್ರೀಮತಿ ಮೀನಾಕ್ಷಿ ಖನ್ನಿಮಠ್, ಮಾನ್ಯ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು, ಶ್ರೀ ವೈ.ವಿ.ಗುಂಡುರಾವ್ ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭಾಗವಹಿಸಿ, ಮಹಿಳಾ ಪ್ರತಿನಿಧಿಗಳೊಂದಿಗೆ ಚರ್ಚಿಸಿದರು. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಸವಾಲುಗಳು ಹಾಗೂ ಅವಕಾಶಗಳ ಕುರಿತು ಮಾಹಿತಿ ನೀಡಿದರು.

ತರಬೇತಿಯ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲರವರು ವಹಿಸಿದ್ದರು. ಸಮಾರೋಪ ಭಾಷಣವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನೆರವೇರಿಸಿದರು. ರಾಜ್ಯದ ವಿವಿಧ ಜಿಲ್ಲೆಗಳ ಮಹಿಳಾ ಸೌಹಾರ್ದ ಸಹಕಾರಿಗಳಿಂದ 55 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದರು.

## ಬೆಂಗಳೂರಿನ ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ, ವಿಭಾಗೀಯ ಕಛೇರಿಗಳಲ್ಲಿ ಹಾಗೂ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 69ನೇ ಸ್ವಾತಂತ್ರ್ಯ ದಿನದ ಆಚರಣೆ



ಕೇಂದ್ರ ಕಛೇರಿ ಹಾಗೂ ಬೆಂಗಳೂರು ವಿಭಾಗೀಯ ಕಛೇರಿ



ಬೆಳಗಾವಿ ವಿಭಾಗೀಯ ಕಛೇರಿ



ಕಲಬುರಗಿ ವಿಭಾಗೀಯ ಕಛೇರಿ



ಮೈಸೂರು ವಿಭಾಗೀಯ ಕಛೇರಿ




ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ




ಶ್ರೀ ಮಹಾಗಣಪತಿ–ಮಹಾಸತಿ (ಎಮ್.ಜಿ.ಎಮ್) ಸೌಹಾರ್ದ ಪತ್ತಿನ ಸಹಕಾರಿ ನಿ., ಸರ್ಪನಕ್ಕಟೆ.

## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಲಿ., ಕೋಲಾರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

ದಿನಾಂಕ : 09.08.2015ರಂದು ಬೆಳಿಗ್ಗೆ 9.30 ಗಂಟೆಗೆ ಸಹಕಾರಿಯ 2014-15ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ನಂತರ ಸಹಕಾರಿಯ ವಿಶೇಷ ಸಭೆಯಲ್ಲಿ ಮುಖ್ಯ ಅಥಿತಿಗಳಾಗಿ ಶ್ರೀ ಲಕ್ಷ್ಮಣ್ ಎಸ್. ಸವದಿ, ಶಾಸಕರು ಹಾಗೂ ಮಾಜಿ ಸಹಕಾರ ಸಚಿವರು, ಕರ್ನಾಟಕ ಸರ್ಕಾರ, ಶ್ರೀ ವೈ. ಕುಮಾರ್, ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಶ್ರೀ ಮಹಂತೇಶ್ ಡಿ ಗೌಡ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಶ್ರೀ ಎ.ರವಿ, ನಿರ್ದೇಶಕರು, ರಾಜ್ಯ ವಕ್ಕಲಿಗರ ಸಂಘ, ಶ್ರೀ ಮುನಿರಾಜು.ಎಸ್, ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಭಾಗವಹಿಸಿದ್ದರು. ಪ್ರತಿಭಾ ಪುರಸ್ಕಾರ, ಉತ್ತಮ ಗ್ರಾಹಕ, ಉತ್ತಮ ಶಾಖೆ, ಉತ್ತಮ ಶಾಖಾ ಸಮಿತಿ ಪುರಸ್ಕಾರಗಳ ಪ್ರಶಸ್ತಿ ಪ್ರಧಾನ ಮಾಡಿ, ಮಾತನಾಡಿದ ಶ್ರೀ ಲಕ್ಷ್ಮಣ್ ಎಸ್. ಸವದಿಯವರು 14 ವರ್ಷಗಳಲ್ಲಿ



ಈ ಸಹಕಾರಿ ಮಾಡಿರುವ ಸಾಧನೆಯನ್ನು ಪ್ರಶಂಸಿಸುತ್ತಾ ಈ ಸಹಕಾರಿಯು ಪಾವಗಡ ಸಹಕಾರಿಯಲ್ಲ ಪವಾಡ ಸಹಕಾರಿಯೆಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಹಕಾರಿಯು 14ನೇ ವರ್ಷವಲ್ಲದೇ ಶತಮಾನೋತ್ಸವನ್ನು ಆಚರಿಸುವಂತಾಗಲಿಯೆಂದು, ಸಹಕಾರಿಯು ಅತ್ಯುನ್ನತ ಮಟ್ಟಕ್ಕೆ ಬೆಳೆಯಲಿ ಎಂದು ಹಾರೈಸಿದರು. ಪ್ರಾಸ್ತಾವಿಕ ಭಾಷಣ ಮಾಡಿದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಾಮಾಜಿಕ ಕಳಕಳಿಯಲ್ಲಿ ಸಹಕಾರಿಯ ಪಾತ್ರ ಅತ್ಯವಶ್ಯಕವೆಂದು ತಿಳಿಸಿದರು.

## ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯ ಲಿಂಗಸೂಗೂರು ಶಾಖೆಯ ದಶಮಾನೋತ್ಸವ ಅಂಗವಾಗಿ ರಾಯಚೂರು-ಕೊಪ್ಪಳ ಜಿಲ್ಲೆಯ ಸಹಕಾರಿಗಳ ಕಾರ್ಯಾಗಾರ



ರಾಯಚೂರು ಜಿಲ್ಲೆಯ ಸಹಕಾರಿಗಳ ಉಪನಿಬಂಧಕರಾದ ಡಾ.ಸುನೀತಾ ಸಿದ್ರಾಮ್, ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್, ಸಂಪನ್ಮೂಲ ವ್ಯಕ್ತಿಗಳಾದ ಡಾ.ನಂದೀಶ ವಿ.ಹಿರೇಮಠ, ಡಾ.ಮಧುಸೂದನ್ ಕಾರಿಗನೂರು, ಸಹಕಾರಿಯ ಅಧ್ಯಕ್ಷರಾದ ಡಾ.ಶಿವಶರಣಪ್ಪ ಇತ್ಲಿ, ಲಿಂಗಸೂಗೂರು ಶಾಖೆಯ ಮುಖ್ಯ ಸಂಯೋಜಕರಾದ ಡಾ.ಎನ್.ಎಲ್. ನಡುವಿನಮನಿ, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ, ಸಹಕಾರಿಯ ನಿರ್ದೇಶಕರು, ಸಲಹಾಸಮಿತಿ ಸದಸ್ಯರು & ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ ಸನ್ಮಾನ

ಮುನವಳ್ಳಿ ಲಿಬರಲ್ ಸೌಹಾರ್ದ ಸಹಕಾರಿ ಲಿ., ಮುನವಳ್ಳಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಭೇಟಿ ನೀಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ ಸನ್ಮಾನ.



## ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಇತರೆ ತೆರಿಗೆ ಕಾನೂನುಗಳ ಕುರಿತು ತರಬೇತಿ ಕಾರ್ಯಕ್ರಮ



**ಜಮಖಂಡಿ :** ದಿನಾಂಕ 13.08.2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್, ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಜಮಖಂಡಿಯಲ್ಲಿ 'ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಇತರೆ ತೆರಿಗೆ ಕಾನೂನು'ಗಳ ಕುರಿತು ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಂ.ಎಸ್ ಯಾರಗಲ್ಲರವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ವಿಧಾನಪರಿಷತ್ ಸದಸ್ಯರು ಹಾಗೂ ಜಮಖಂಡಿಯ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಿ.ಎಸ್ ನ್ಯಾಮಗೌಡರವರು ವಹಿಸಿದ್ದರು. ತರಬೇತಿ ಕಾಯಕ್ರಮದಲ್ಲಿ 68 ಸಹಕಾರಿಗಳಿಂದ 72 ಪ್ರತಿನಿಧಿಗಳು ಭಾಗವಹಿಸಿದ್ದರು.

## ಚಿಕ್ಕೋಡಿಯಲ್ಲಿ 'ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಇತರ ತೆರಿಗೆ ಕಾನೂನು'ಗಳ ಕುರಿತು ತರಬೇತಿ ಕಾರ್ಯಕ್ರಮ



**ಚಿಕ್ಕೋಡಿ :** ದಿನಾಂಕ 14.08.2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್, ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಸಹಕಾರ ಸಂಘಗಳ ಅಧ್ಯಕ್ಷರು, ಮುಖ್ಯಕಾರ್ಯನಿರ್ವಾಹಕರಿಗಾಗಿ 'ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಇತರ ತೆರಿಗೆ ಕಾನೂನು'ಗಳ ಕುರಿತು ಚಿಕ್ಕೋಡಿಯ ಹುಲಿಗೆಮ್ಮಾ ರೆಸಿಡೆನ್ಸಿ ಹೋಟೆಲ್‌ನಲ್ಲಿ ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಾವಸಾಹೇಬ ಅ. ಪಾಟೀಲರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಆರ್.ವಿ.ಕುಲಕರ್ಣಿ ಆಗಮಿಸಿದ್ದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಬಾಬುರಾವ್ ಜಾಧವರವರು ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಶ್ರೀ ಬಿ.ಎ.ಮಹದೇವಪ್ಪರವರು ಆಗಮಿಸಿದ್ದರು. ತರಬೇತಿ ಕಾಯಕ್ರಮದಲ್ಲಿ 69 ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು.

## ಹಣಕಾಸು ನಿರ್ವಹಣೆ, ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕ ಪತ್ರಗಳ ಸಿದ್ಧತೆ ಹಾಗೂ ಆದಾಯ ತೆರಿಗೆ ಮತ್ತು ಇತರೆ ತೆರಿಗೆ ಕಾನೂನುಗಳ ಕುರಿತು ತರಬೇತಿ ಕಾರ್ಯಕ್ರಮ

**ವಿಜಯಪುರ :** ದಿನಾಂಕ 26.08.2015ರಂದು ಕನಾರ್ಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಜಯಪುರ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ 'ಹಣಕಾಸು ನಿರ್ವಹಣೆ, ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕ ಪತ್ರಗಳ ಸಿದ್ಧತೆ ಹಾಗೂ ಆದಾಯ ತೆರಿಗೆ ಮತ್ತು ಇತರೆ ತೆರಿಗೆ ಕಾನೂನು'ಗಳ ಕುರಿತು ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ವಿಜಯಪುರ ಜಿಲ್ಲಾ ಸಹಕಾರಿಗಳ ಉಪನಿಬಂಧಕರಾದ ಶ್ರೀಮತಿ ಸಾವಿತ್ರಿ ಬಿ.ಕಡಿರವರು ಉದ್ಘಾಟಿಸಿದರು.



ತರಬೇತಿ ಕಾಯಕ್ರಮದಲ್ಲಿ 46 ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿದ್ದರು.



## ಸೆಪ್ಟೆಂಬರ್ 5 ಶಿಕ್ಷಕರ ದಿನಾಚರಣೆ ಶುಭಾಶಯಗಳು

**ಡಾ. ಎಸ್. ರಾಧಾಕೃಷ್ಣನ್ ನೆನಪು**

## ಇ-ಸ್ಟ್ಯಾಂಪ್ ಪೇಪರ್

ಪ್ರಸ್ತುತ ಇ-ಸ್ಟ್ಯಾಂಪ್ ಕಾಗದಕ್ಕೆ ಯಾವುದೇ ಕಾಲಾವಧಿಯನ್ನು ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಮುದ್ರಾಂಕ ಅಧಿನಿಯಮ, 1959ರಲ್ಲಿ ನಿಗದಿಪಡಿಸಿರುವುದಿಲ್ಲ. ಮುಂದಿನ ದಿನಗಳಲ್ಲಿ ಕರ್ನಾಟಕ ಸರ್ಕಾರ ಈ ಕಾಯ್ದೆಗೆ ತಿದ್ದುಪಡಿ ಕೈಗೊಂಡು ಕಾಲಾವಧಿಯನ್ನು ನಿಗದಿಪಡಿಸಿದರೆ, ಅಂದಿನಿಂದ ಇ-ಸ್ಟ್ಯಾಂಪ್ ಕಾಗದಕ್ಕೆ ಕಾಲಾವಧಿ ಅನ್ವಯವಾಗುತ್ತದೆ.

## 'ಹಣಕಾಸು ನಿರ್ವಹಣೆ, ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕ ಪತ್ರಗಳ ಸಿದ್ಧತೆ ಹಾಗೂ ಆದಾಯ ತೆರಿಗೆ ಮತ್ತು ಇತರೆ ತೆರಿಗೆ ಕಾನೂನು'ಗಳ ತರಬೇತಿ ಕಾರ್ಯಕ್ರಮ



**ಹುಕ್ಕೇರಿ :** ದಿನಾಂಕ : 27.08.2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕನ್ನಡ ಸಾಹಿತ್ಯ ಭವನದಲ್ಲಿ 'ಹಣಕಾಸು ನಿರ್ವಹಣೆ, ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕ ಪತ್ರಗಳ ಸಿದ್ಧತೆ ಹಾಗೂ ಆದಾಯ ತೆರಿಗೆ ಮತ್ತು ಇತರೆ ತೆರಿಗೆ ಕಾನೂನು'ಗಳ ಕುರಿತು ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಬಾಬುರಾವ್ ಜಾಧವರವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಬೆಳಗಾವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎಸ್.ಮುತಾಲಿಕರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶ್ರೀಕಾಂತ ಹತನೂರೆರವರು ಆಗಮಿಸಿದ್ದರು. ತರಬೇತಿ ಕಾಯಕ್ರಮದಲ್ಲಿ 90 ಸಹಕಾರಿಗಳಿಂದ 102 ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಕ್ರಮ ಹಾಗೂ ಸಂಪರ್ಕ ಸಭೆ

**ಹಾವೇರಿ :** ದಿನಾಂಕ : 29.08.2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಹಾವೇರಿ ಜಿಲ್ಲೆಯ ಸಹಕಾರ ಸಂಘಗಳಿಗಾಗಿ "ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಕ್ರಮ"ವನ್ನು ಬೆಳಿಗ್ಗೆ 10:30 ಗಂಟೆಗೆ ಹಾಗೂ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ "ಸಂಪರ್ಕ ಸಭೆ"ಯನ್ನು ಮಧ್ಯಾಹ್ನ 3:00 ಗಂಟೆಗೆ ಹಾವೇರಿ ನಗರದ ಆಶೋಕ ಹೊಟೇಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.



**ಅಧಿಪ್ರೇರಣೆ ಮತ್ತು ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಕ್ರಮ :** ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಪ್ರದೀಪ್ ದಾಬಶೆಟ್ಟಿ, ಹಾವೇರಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಕಲ್ಯಾಣಕುಮಾರ ಎಸ್. ಶೆಟ್ಟರ್, ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್‌ನ ಹಾವೇರಿ ಜಿಲ್ಲಾ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪರವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ಎ ಮಹಾದೇವಪ್ಪರವರು ಆಗಮಿಸಿದ್ದರು. ತರಬೇತಿ ಕಾಯಕ್ರಮದಲ್ಲಿ 40 ಸಹಕಾರಿಗಳಿಂದ 43 ಪ್ರತಿನಿಧಿಗಳು ಭಾಗವಹಿಸಿದ್ದರು.

**ಸಂಪರ್ಕ ಸಭೆ :** ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲ್‌ರವರು ವಹಿಸಿದ್ದರು. ಸಭೆಯಲ್ಲಿ ಹಾವೇರಿ ಜಿಲ್ಲೆಯ 42 ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದರು.



## ಸೌಹಾರ್ದ ಸಹಕಾರಿಗಳಲ್ಲಿ ಹಣಕಾಸು ನಿರ್ವಹಣೆ ಹಾಗೂ ಆರ್ಥಿಕ ತಃಖ್ತೆಗಳ ವಿಶ್ಲೇಷಣೆ ಕುರಿತು ತರಬೇತಿ ಕಾರ್ಯಕ್ರಮ



ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳು : ದಿನಾಂಕ 26.08.2015ರಂದು ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಅಪೂರ್ವ ರೆಸ್ಟೋರೆಂಟ್, ದಾವಣಗೆರೆಯಲ್ಲಿ ಸೌಹಾರ್ದ ಸಹಕಾರಿಗಳಲ್ಲಿ 'ಹಣಕಾಸು ನಿರ್ವಹಣೆ ಹಾಗೂ ಆರ್ಥಿಕ ತಃಖ್ತೆಗಳ ವಿಶ್ಲೇಷಣೆ' ಕುರಿತು ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಶ್ರೀ ಎನ್. ರಮೇಶ್, ಸಹಕಾರಿಗಳ ಉಪನಿಬಂಧಕರು, ದಾವಣಗೆರೆ ಇವರು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಿಗಾಗಿ ಶ್ರೀ ಎ.ಸಿ.ಮಹಾರುದ್ರಪ್ಪ, ನಿವೃತ್ತ ಸಹಾಯಕ ನಿಬಂಧಕರು ಇವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಜಿ.ನಂಜನಗೌಡರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ಎ.ಮಹದೇವಪ್ಪ ಹಾಗೂ ಶ್ರೀ ರಮೇಶ ಹೆಗಡೆ ಇವರುಗಳು ಆಗಮಿಸಿದ್ದರು. ತರಬೇತಿ ಕಾರ್ಯಕ್ರಮದಲ್ಲಿ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಂದ 82 ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ಇತರ ತೆರಿಗೆಗಳ ಕುರಿತು ತರಬೇತಿ ಕಾರ್ಯಕ್ರಮ

**ಶಿವಮೊಗ್ಗ :** ದಿನಾಂಕ 27.08.2015ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್, ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗ ಜಿಲ್ಲೆಯ ಸಹಕಾರ ಸಂಘಗಳಿಗಾಗಿ 'ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ಮತ್ತು ಆದಾಯ ತೆರಿಗೆ ಹಾಗೂ ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ಇತರ ತೆರಿಗೆಗಳು' ಕುರಿತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಶಿವಮೊಗ್ಗದಲ್ಲಿ ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಹೆಚ್.ಎಲ್. ಷಡಕ್ಷರಿರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶಿವಮೊಗ್ಗ ಜಿಲ್ಲೆಯ ಸಹಕಾರಿಗಳ ಉಪನಿಬಂಧಕರಾದ ಶ್ರೀ ಎ.ಎಸ್.ಜಯಪ್ಪ, ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ನಾಗರಾಜ ಶೆಟ್ಟಿ, ಆರ್ಯ ವೈಶ್ಯ ಶ್ರೀರಾಮ ಪತ್ತಿನ ಸಹಕಾರ ಸಂಘ ನಿಯಮಿತದ ನಿರ್ದೇಶಕರಾದ ಶ್ರೀ ಮಹೇಶ್ವರ ಶೆಟ್ಟಿ, ಶಿವಮೊಗ್ಗ ಡಿ.ಸಿ.ಸಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಜಣ್ಣ ರೆಡ್ಡಿರವರು ಆಗಮಿಸಿದ್ದರು.



ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರವಿಕುಮಾರರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುಭಾಷ್ ಹೆಗಡೆ ಹಾಗೂ ಶ್ರೀ ಸುಬ್ರಮಣ್ಯ ಹೆಗಡೆ ಇವರಗಳು ಆಗಮಿಸಿದ್ದರು. ಶಿವಮೊಗ್ಗ ಜಿಲ್ಲೆಯಿಂದ 126 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

## ಕ್ಯಾಂಪ್ಕೋ ಅಧ್ಯಕ್ಷರಾಗಿ ಶ್ರೀ ಎಸ್.ಆರ್.ಸತೀಶ್ಚಂದ್ರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಕೆ.ಶಂಕರನಾರಾಯಣ ಭಟ್

ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಪ್ರತಿಷ್ಠಿತ ಕ್ಯಾಂಪ್ಕೋ ಅಧ್ಯಕ್ಷರಾಗಿ ಹಾಗೂ ಶ್ರೀ ಕೆ.ಶಂಕರನಾರಾಯಣ ಭಟ್‌ರವರು ಉಪಾಧ್ಯಕ್ಷ ರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುತ್ತಾರೆ. ಶ್ರೀಯುತರುಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.



## ಕ್ಯಾಂಪ್ಕೋ ನೂತನ ಅಧ್ಯಕ್ಷರಿಗೆ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಿಂದ ಅಭಿನಂದನೆ



ಕ್ಯಾಂಪ್ಕೋ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿರುವ ಶ್ರೀ ಎಸ್.ಆರ್.ಸತೀಶ್ಚಂದ್ರರವರನ್ನು ಅಭಿನಂದಿಸಲಾಯಿತು.

ಈ ಸಮಾರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಂ ಅನಂತಕೃಷ್ಣ ನಾಯಕ್, ನಿರ್ದೇಶಕರಾದ ಶ್ರೀ ಪದ್ಮನಾಭ ಬೋರ್ಕರ್, ಶ್ರೀ ಸುನಿಲ್ ಬೋರ್ಕರ್, ಶ್ರೀ ದೇವಿಪ್ರಸಾದ್ ಕಲ್ಲಾಜೆ, ಶ್ರೀ ವಿನಯ ಕುಮಾರ್ ಕಂದಡ್ಕ, ಶ್ರೀ ಅಜಿತ್ ರಾವ್ ಶ್ರೀ ರಮೇಶ್ ಪ್ರಭು, ಬಾಲಾವಲಿಕಾರ್ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಸೇವಾ ಸಂಘದ ನಿರ್ದೇಶಕರಾದ ಶ್ರೀ ಎಸ್. ಆರ್ ನಾಯಕ್ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ ಕಡಬ ಶಾಖೆಯ ವ್ಯವಸ್ಥಾಪಕರಾದ ಶ್ರೀ ಪ್ರಕಾಶ್ಚಂದ್ರ ರೈ ರವರು ಉಪಸ್ಥಿತರಿದ್ದರು.

## ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ನೂತನ ಅಧ್ಯಕ್ಷರಿಗೆ ಅಭಿನಂದನೆ

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಕೆ.ಎನ್.ರಾಜಣ್ಣರವರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರಿಂದ ಅಭಿನಂದನೆ. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಮಾಹಿತಿ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಎಸ್.ಆರ್.ಪಾಟೀಲ್ ಉಪಸ್ಥಿತರಿದ್ದರು.





## ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ಆಯ್ಕೆ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ನೂತನ ಅಧ್ಯಕ್ಷರಾಗಿ ಶ್ರೀ ಶೇಖರಗೌಡ ವಿರೂಪಾಕ್ಷಗೌಡ ಮಾಲಿ ಪಾಟೀಲ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಹೆಚ್.ವಿ.ನಾಗರಾಜುರವರ ಆಯ್ಕೆ. ಶ್ರೀಯುತರುಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.



## ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಡಿ-ಕನ್ಯಾಣ ಸಹಕಾರಿಯಿಂದ ಸಮಾಜಮುಖಿ ಕಾರ್ಯಯೋಜನೆ : ಉಚಿತ ಕಣ್ಣಿನ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ



ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಡಿ-ಕನ್ಯಾಣ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕೋಡಿ-ಕನ್ಯಾಣ ಮತ್ತು ಪ್ರಸಾದ್ ನೇತ್ರಾಲಯ, ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಉಡುಪಿ, ನೇತ್ರಜ್ಯೋತಿ ಚಾರಿಟೇಬಲ್ ಟ್ರಸ್ಟ್, ಉಡುಪಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಅಂಧತ್ವ ನಿವಾರಣಾ ವಿಭಾಗ, ಉಡುಪಿ ಜಿಲ್ಲೆ ಇವರುಗಳ ಜಂಟಿ ಆಶ್ರಯದಲ್ಲಿ ದಿ. ಸೋಮಬಂಗೇರ ಸ್ಮಾರಕ ಸರಕಾರಿ ಪದವಿಪೂರ್ವ ಕಾಲೇಜು, ಕೋಡಿ-ಕನ್ಯಾಣದಲ್ಲಿ "ಕಣ್ಣಿನ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ"ವನ್ನು ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಶ್ರೀ ಭಾಸ್ಕರ ಕಾಮತ್, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಶ್ರೀ ಮಂಜುನಾಥ.ಎಸ್.ಕೆ., ನಿರ್ದೇಶಕರು, ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್, ಶ್ರೀ ಸುಬ್ರಹ್ಮಣ್ಯ, ಮೇಲ್ವಿಚಾರಕರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಶ್ರೀ ಶ್ರೀಕಾಂತ್ ಹೆಗಡೆ, ಮುಖ್ಯೋಪಾಧ್ಯಾಯರು, ಸರಕಾರಿ ಪ್ರೌಢಶಾಲೆ, ಕೋಡಿ, ಶ್ರೀಮತಿ ಪುಷ್ಪಾ, ಅಧ್ಯಕ್ಷರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಅಧ್ಯಕ್ಷರು, ಕೋಡಿ-ಕನ್ಯಾಣ ಘಟಕ ಹಾಗೂ ಡಾ॥ ಶಶಿಧರ್ ವೈದ್ಯರು, ಪ್ರಸಾದ್ ನೇತ್ರಾಲಯ, ಉಡುಪಿ ಆಗಮಿಸಿದ್ದರು. ಶಿಬಿರದಲ್ಲಿ ಒಟ್ಟು 300ರವರೆಗೆ ಶಿಬಿರಾರ್ಥಿಗಳು ಚಿಕಿತ್ಸೆ ಪಡೆದುಕೊಂಡು, 46 ಮಂದಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಹಾಗೂ 100 ಮಂದಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಿಸಲಾಯಿತು.

ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿಯಲ್ಲಿ ಆನ್‌ಲೈನ್ ಮಾರಾಟ ವ್ಯವಸ್ಥೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ, ಮಾರಾಟ ವ್ಯವಸ್ಥೆ ಜಾರಿ ಮಾಡಿದ ಮೊದಲ ಸಹಕಾರಿ ಸಂಸ್ಥೆ
It is a time for online shopping !!! Now our products available in ebay...!! Please check the below link and start shopping!!
**http://goo.gl/ZEGSCS** Kadamba Marketing Souharda Sahakari Ltd.
#7, A.P.M.C.Yard Sirsi (U.K), Karnataka, India - 581402 Ph : 08384 233163, Email: contact@kadambamarketing.com



ಸರಸ್ವತಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ ಸರ್ವಸದಸ್ಯರ ಮಹಾಸಭೆ



ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಸಹಕಾರಿಯ ವಾರ್ಷಿಕ ಮಹಾಸಭೆ.



ಸುರಕ್ಷಾ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯ ವಾರ್ಷಿಕ ಮಹಾಸಭೆ.



ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಬೆಂಗಳೂರು ಸಹಕಾರಿಯ 3ನೇ ವಾರ್ಷಿಕ ಸದಸ್ಯರ ಸಾಮಾನ್ಯ ಸಭೆ.

## ಶುಶೃತಿ ಬ್ಯಾಂಕ್ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ತನ್ನ ಸದಸ್ಯರಿಗೆ, ಗ್ರಾಹಕರಿಗೆ ಸಲ್ಲಿಸುತ್ತಿರುವ ಬ್ಯಾಂಕಿಂಗೇತರ ಸೇವೆಗಳು

- ಹೊರ ರಾಜ್ಯಗಳಿಗೆ ಡಿಡಿ ವಿತರಣೆ.
- ಲಾಕರ್ ಸೌಲಭ್ಯ.
- ಹಣ ವರ್ಗಾವಣೆ ಸೌಲಭ್ಯ. (RTGS, NEFT)
- ಆದಾಯ ತೆರಿಗೆಗಳನ್ನು ಕಟ್ಟುವುದು. (IT, TDS, SERVICE TAX, VAT)
- ಠೇವಣಿದಾರರ ಠೇವಣಿಗಳಿಗೆ ವಿಮೆ ಮಾಡಿಸುವುದು.
- ವಿದ್ಯಾರ್ಥಿಗಳಿಗೆ ಕನಿಷ್ಠ ಠೇವಣಿಯಿಲ್ಲದೇ ಖಾತೆಗಳನ್ನು ತೆರೆಯುವುದು.
- ಕೆಳವರ್ಗದ ಗ್ರಾಹಕರಿಗೆ "0" (ZERO) ಬ್ಯಾಲೆನ್ಸ್ ಖಾತೆಗಳನ್ನು ತೆರೆಯುವುದು.
- ಛಾಪಾಕಾಗದಗಳನ್ನು ವಿತರಿಸುವುದು–ಇ Stamp Papers.
- ಪ್ಯಾನ್ ಕಾರ್ಡ್‌ಗಳನ್ನು (PAN) ಸಹ ಗ್ರಾಹಕರಿಗೆ, ಸದಸ್ಯರಿಗೆ ಬ್ಯಾಂಕಿನಲ್ಲೇ ಮಾಡಿಸುವ ವ್ಯವಸ್ಥೆ ಮಾಡಿ ಗ್ರಾಹಕರ ಸೇವೆ ಸಲ್ಲಿಸುತ್ತಿದೆ.
- ಬ್ಯಾಂಕಿನ ಎಲ್ಲಾ ಶಾಖೆಗಳು CBS ಮುಖಾಂತರ ಕೇಂದ್ರೀಕರಿಸಲಾಗಿದೆ. (Fully CBS and computerized)
- ಗ್ಯಾಸ್ ಸಬ್ಸಿಡಿಯನ್ನು (GAS SUBSIDY) ಸಹ ನೇರವಾಗಿ ಗ್ರಾಹಕರ ಖಾತೆಗೆ ವರ್ಗಾಯಿಸುತ್ತಿದ್ದೇವೆ.
- ಕರ್ನಾಟಕ ರಾಜ್ಯದಲ್ಲಿರುವ ಸದಸ್ಯರ ಆರೋಗ್ಯಕ್ಕಾಗಿ "ಯಶಸ್ವಿನಿ ಕಾರ್ಡ್‌ಗಳನ್ನು" ಸಹ ವಿತರಿಸಿ ಸದಸ್ಯರ ಆರೋಗ್ಯವನ್ನು ಸುಧಾರಿಸಲು ಪ್ರಯತ್ನಿಸುತ್ತಿದ್ದೇವೆ.

ಇವುಗಳಲ್ಲದೇ, ಪ್ರಧಾನ ಮಂತ್ರಿಗಳು ಜನ ಸಾಮಾನ್ಯರಿಗೆ ಹೊರಡಿಸಿರುವ ಮೂರು ಸೇವೆಗಳಾದ ಪ್ರಧಾನ ಮಂತ್ರಿಗಳ ಜೀವನ ಜ್ಯೋತಿ ಯೋಜನೆ (PMJJBY), ಪ್ರಧಾನ ಮಂತ್ರಿಗಳ ಸುರಕ್ಷ ಭೀಮ ಯೋಜನೆ (PMSBY), ಅಟಲ್ ಪಿಂಚಣಿ ಯೋಜನೆಗಳನ್ನು (APY) ಸಹ ನಮ್ಮ ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ನೀಡುತ್ತಿದ್ದೇವೆ.

ಪ್ರಧಾನ ಮಂತ್ರಿಗಳ ವಿಮಾ ಯೋಜನೆಗೆ ಶುಶೃತಿ ಬ್ಯಾಂಕ್ ತನ್ನದೇ ಆದ ಯೋಜನೆಗಳನ್ನು ರೂಪಿಸಿದೆ. 18–50 ವರ್ಷದವರು ರೂ.3000/– ಗಳನ್ನು ಮತ್ತು 50–70 ವರ್ಷದವರು ರೂ.500/– ಗಳನ್ನು ಶುಶೃತಿ ಬ್ಯಾಂಕಿನ ನಿಶ್ಚಿತ ಠೇವಣಿಯಲ್ಲಿ ತೊಡಗಿಸಿದರೆ, ಅವರು ಪ್ರತಿ ವರ್ಷ ವಿಮೆಯ ಕಂತಾದ ರೂ.330/– ಮತ್ತು ರೂ.12/– ಗಳನ್ನು ಕಟ್ಟುವ ಅಗತ್ಯವಿಲ್ಲ. ಅದನ್ನು ಶುಶೃತಿ ಬ್ಯಾಂಕ್ ನಿಶ್ಚಿತ ಠೇವಣಿಯಿಂದ ಬರುವ ಬಡ್ಡಿಯಿಂದ ಸರಿತೂಗಿಸುತ್ತದೆ ಮತ್ತು ಅಂತ್ಯದಲ್ಲಿ ಠೇವಣಿಯನ್ನು ಸಹ ಹಿಂತಿರುಗಿಸುತ್ತದೆ.



ಶಂಕರ ಕಣ್ಣಿನ ಆಸ್ಪತ್ರೆ ವತಿಯಿಂದ ಶ್ರೀ ರಾಮಾನುಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಮತ್ತು ರೋಟರಿ ಕ್ಲಬ್ ಜ್ಯುಬಿಲಿ ಸಹಯೋಗದಿಂದ "ಉಚಿತ ನೇತ್ರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ".



ಕಲ್ಪತರು ಇರಾಡ್ಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಅಕ್ಕಿ–ಆಲೂರ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲರವರಿಂದ ಉದ್ಘಾಟನೆ.

## ಹಿರಿಯ ಸಾಹಿತಿ ಎಂ ಎಂ ಕಲಬುರ್ಗಿಯವರಿಗೆ ಶ್ರದ್ಧಾಂಜಲಿ



**ಧಾರವಾಡ :** ಹಿರಿಯ ಸಾಹಿತಿ ಹಾಗೂ ಸಂಶೋಧಕ ಎಂ ಎಂ ಕಲಬುರ್ಗಿ ಅವರ ನಿವಾಸದಲ್ಲಿ ನಡೆದಂತಹ ಗುಂಡಿನ ದಾಳಿಯಲ್ಲಿ ಎಂ ಎಂ ಕಲಬುರ್ಗಿ ಅವರು ಸಾವನ್ನಪ್ಪಿದ್ದಾರೆ. ದೇಶದ ಖ್ಯಾತ ಸಂಶೋಧಕರಾಗಿದ್ದ ಡಾ.ಎಂ ಎಂ ಕಲಬುರ್ಗಿ ಅವರು 1938ರ ನವೆಂಬರ್ 28ರಂದು ಬಿಜಾಪುರ ಜಿಲ್ಲೆ ಸಿಂದಗಿ ತಾಲೂಕಿನ ಗುಬ್ಬೇವಾಡದಲ್ಲಿ ಜನಿಸಿದ್ದರು. ಕನ್ನಡ ಸಂಸ್ಕೃತಿ, ಇತಿಹಾಸ, ಸಾಹಿತ್ಯ, ಶಾಸನ, ಜಾನಪದ, ವ್ಯಾಕರಣ, ಹಸ್ತ ಪ್ರತಿಶಾಸ್ತ್ರ, ಗ್ರಂಥ ಸಂಪಾದನಾಶಾಸ್ತ್ರ, ಛಂದಸ್ಸು ಸೇರಿ ಹಲವಾರು ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಿದ್ದಾರೆ. ಸಾಹಿತ್ಯ ಮಾರ್ಗಕ್ಕಿಂತ ಸಂಶೋಧನಾ ಮಾರ್ಗವನ್ನು ಆಯ್ಕೆ ಮಾಡಿದ ಅವರು 1962ರಲ್ಲಿ ಕರ್ನಾಟಕ ವಿವಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಮಾಡಿದ್ದರು. ಹಂಪಿಯಲ್ಲಿನ ಕನ್ನಡ ವಿವಿ ಕುಲಪತಿಗಳಾಗಿಯೂ ಸೇವೆ ಸಲ್ಲಿಸಿದ ಕಲಬುರ್ಗಿ ಅವರ ಮೊದಲ ಕೃತಿ 'ಬಸವಣ್ಣನವರನ್ನು ಕುರಿತ ಶಾಸನಗಳು'. 41 ಪ್ರಾಚೀನ ಗ್ರಂಥ ಸಂಪಾದನೆ ಹಾಗೂ 100 ಕೃತಿಗಳ ರಸಿದ್ದಾರೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿ ವತಿಯಿಂದ ಹಾಗೂ ರಾಜ್ಯದ ಎಲ್ಲಾ ಸಹಕಾರಿಗಳ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ ಸಹಕಾರಿಯ 1ನೇ ಸರ್ವಸದಸ್ಯರ ಸಾಮಾನ್ಯ ಸಭೆ.




ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ್ ನಿ., ಬಾಗಲಕೋಟೆ ಸಹಕಾರಿಯ 98ನೇ ವಾರ್ಷಿಕ ಸಭೆ.



ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೈಂದೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯ 5ನೇ ವರ್ಷದ ವಾರ್ಷಿಕ ಮಹಾಸಭೆ.



ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ, ಸಾಲಿಗ್ರಾಮ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಆರನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ.



ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ 12ನೇ ವಾರ್ಷಿಕ ಮಹಾಸಭೆ.




ಯು.ಕೆ. ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಯಲ್ಲಾಪುರ ಸಹಕಾರಿಯ ವಾರ್ಷಿಕ ಸಭೆ.



ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಇದರ 10ನೇ ಸರ್ವ ಸದಸ್ಯರ ಸಭೆಯನ್ನು ದಿನಾಂಕ : 09-08-2015ರಂದು ಶ್ರೀ ಎ.ಆರ್.ಪ್ರಸನ್ನ ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಮಥುರಾ ಪ್ಯಾರಡೈಸ್‌ನಲ್ಲಿ ನೆರವೇರಿತು.



ಜನಹಿತ ಸೌಹಾರ್ದ ಸಹಕಾರಿ ನಿಯಮಿತ ಉಡುಪಿ ಸಹಕಾರಿಯ 8ನೇ ಮಹಾಸಭೆಯು ಗೋಪಾಲ್ ಯು. ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

– ಶ್ರೀಕಾಂತ ಬರುವೆ

**1. ಸಹಕಾರಿಯಲ್ಲಿ ಎಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುವಾಗ ಭವಿಷ್ಯ ನಿಧಿ ಅಧಿನಿಯಮ, 1952ರಡಿ ನೋಂದಣಿ ಮಾಡಿಸಬೇಕಾಗುತ್ತದೆ?**

**ಉತ್ತರ** : ಭವಿಷ್ಯ ನಿಧಿ ಅಧಿನಿಯಮ, 1952 ಕಲಂ 3(ಎ)ರನ್ವಯ ಸಹಕಾರಿಯು ವಿದ್ಯುಚ್ಛಕ್ತಿಯ ಸಹಾಯದಿಂದ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ (with aid of the power) ಸಹಕಾರಿಯ ಉದ್ಯೋಗಿಗಳ ಸಂಖ್ಯೆ 20 ಅಥವಾ ಅದಕ್ಕಿಂತ ಹೆಚ್ಚಿರುವಾಗ ಕಡ್ಡಾಯವಾಗಿ ಭವಿಷ್ಯ ನಿಧಿ ಅಧಿನಿಯಮ, 1952ರಡಿ ಕಡ್ಡಾಯವಾಗಿ ನೋಂದಾಯಿಸಬೇಕಾಗುತ್ತದೆ. ಅಧಿನಿಯಮ ಕಲಂ 16 (1)(ಎ)ರನ್ವಯ ಸಹಕಾರಿಯು ವಿದ್ಯುಚ್ಛಕ್ತಿಯ ಸಹಾಯವಿಲ್ಲದೇ ಕಾರ್ಯನಿರ್ವಹಿಸುತ್ತಿದ್ದರೆ (without aid of the power) ಅಂತಹ ಸಹಕಾರಿಯ ಉದ್ಯೋಗಿಗಳ ಸಂಖ್ಯೆ 50 ಅಥವಾ ಅದಕ್ಕಿಂತ ಹೆಚ್ಚಿದ್ದಾಗ ಕಡ್ಡಾಯವಾಗಿ ಭವಿಷ್ಯ ನಿಧಿ ಅಧಿನಿಯಮ, 1952ರಡಿ ನೋಂದಾಯಿಸಬೇಕಾಗುತ್ತದೆ. ಈ ಮೇಲಿನ ಕಡ್ಡಾಯ ನೋಂದಣಿಯ ಹೊರತಾಗಿಯೂ ಸಹಕಾರಿಯು ಎಷ್ಟೇ ಸಂಖ್ಯೆಯ ಉದ್ಯೋಗಿಗಳಿದ್ದರೂ ಸಹ ಭವಿಷ್ಯ ನಿಧಿ ಅಧಿನಿಯಮ, 1952ರಡಿ ಸ್ವಯಂಪ್ರೇರಿತವಾಗಿ ನೋಂದಣಿ ಹೊಂದಬಹುದಾಗಿರುತ್ತದೆ.

**2. ಲೆಕ್ಕಪರಿಶೋಧನೆಯನ್ನು ಸಹಕಾರಿಯು ಯಾವ ಅವಧಿಯೊಳಗೆ ಮುಕ್ತಾಯಗೊಳಿಸತಕ್ಕದ್ದು? ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಯಾರಿಗೆ ಸಲ್ಲಿಸಬೇಕಾಗುತ್ತದೆ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 33 (1)ರನ್ವಯ ಪ್ರತಿವರ್ಷ ಸೆಪ್ಟೆಂಬರ್ 01ರ ಒಳಗಾಗಿ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 27(ಹೆಚ್–2) ರನ್ವಯ ಸಹಕಾರಿಯ ಆಡಳಿತ ಮಂಡಲಿಯು ಲೆಕ್ಕಪರಿಶೋಧನೆಯನ್ನು ಸೆಪ್ಟೆಂಬರ್ 01ರ ಒಳಗಾಗಿ ಪೂರ್ಣಗೊಳಿಸಿ, ಪಡೆದುಕೊಳ್ಳಲು ಕ್ರಮವಿಡಬೇಕಾಗುತ್ತದೆ. ಲೆಕ್ಕಪರಿಶೋಧನಾ ವರದಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 33 (8)ರನ್ವಯ ಸನ್ನದು ಲೆಕ್ಕಪರಿಶೋಧಕನು ಸಹಕಾರಿಗೆ ಮತ್ತು ಅದರ ಪ್ರತಿಗಳನ್ನು ಸಂಯುಕ್ತ ಸಹಕಾರಿಗೆ, ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆ ಏಜೆನ್ಸಿಗೆ ಮತ್ತು ಸಹಕಾರಿಯು ಯಾವುದೇ ಇತರ ಸಹಕಾರಿ ಯೊಡನೆ ಸಂಯೋಜಿತವಾಗಿದ್ದರೆ ಆ ಸಹಕಾರಿಗೆ ಕಳುಹಿಸತಕ್ಕದ್ದು.

**3. ಸಹಕಾರಿಯು ವಿವಿಧ ಸಾಲಗಳಿಗೆ ಮತ್ತು ಠೇವಣಿಗಳಿಗೆ ಬಡ್ಡಿಯನ್ನು ಯಾರು ನಿಗದಿ ಮಾಡಬೇಕು?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 23 (1) ರನ್ವಯ ಸಹಕಾರಿಯ ಅಂತಿಮ ಅಧಿಕಾರ ಸಾಮಾನ್ಯ ನಿಕಾಯದಲ್ಲಿ ನಿಹಿತವಾಗಿರುತ್ತದೆ. ಆದ್ದರಿಂದ, ಸಹಕಾರಿಯ ಆಡಳಿತ ಮಂಡಲಿಗೆ ಸಾಮಾನ್ಯ ಸಭೆಯು ಕಾಲಕಾಲಕ್ಕೆ ವಿವಿಧ ಸಾಲಗಳಿಗೆ ಮತ್ತು ಠೇವಣಿಗಳಿಗೆ ಬಡ್ಡಿಯನ್ನು ನಿಗದಿಪಡಿಸುವ ಅಧಿಕಾರವನ್ನು ನೀಡಿದ್ದರೆ ಸಹಕಾರಿಯ ಆಡಳಿತ ಮಂಡಲಿಯು ವಿವಿಧ ಸಾಲಗಳಿಗೆ ಮತ್ತು ಠೇವಣಿಗಳಿಗೆ ಬಡ್ಡಿಯನ್ನು ನಿಗದಿಪಡಿಸಬಹುದಾಗಿರುತ್ತದೆ.

**4. ಸಹಕಾರಿಯ ನಿರ್ದೇಶಕರು ಮತ್ತು ಅವರ ಸಂಬಂಧಿಕರಿಗೆ ಸಾಲವನ್ನು ನೀಡಬಹುದೇ? ಮತ್ತು ನಿರ್ದೇಶಕರ ಸಂಬಂಧಿಕರು ಎಂದರೆ ಯಾರು?**

**ಉತ್ತರ** : ಸಹಕಾರಿಯ ನಿರ್ದೇಶಕರು ಮತ್ತು ಅವರ ಸಂಬಂಧಿಕರಿಗೆ ಸಾಲವನ್ನು ನೀಡಬಹುದು (ಪಟ್ಟಣ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿ). ಆದರೆ, ಸಂಯುಕ್ತ ಸಹಕಾರಿಯ ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿಯನ್ವಯ ಸಹಕಾರಿಯು ನಿರ್ದೇಶಕರು ಹಾಗೂ ಅವರ ಸಂಬಂಧಿಗಳಿಗೆ ಸೇರಿ ನೀಡಿದ ಒಟ್ಟು ಸಾಲದ ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇ.10ನ್ನು ಮೀರಬಾರದು. ಸಂಯುಕ್ತ ಸಹಕಾರಿಯು ನೀಡಿರುವ ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿಯಲ್ಲಿ 'ಸಂಬಂಧಿ' ಎಂದರೆ ತಂದೆ, ತಾಯಿ, ಗಂಡ, ಹೆಂಡತಿ, ಗಂಡುಮಕ್ಕಳು, ಗಂಡುಮಕ್ಕಳ ಹೆಂಡಂದಿರು, ಹೆಣ್ಣುಮಕ್ಕಳು, ಹೆಣ್ಣುಮಕ್ಕಳ ಗಂಡಂದಿರು, ಪಾಲು ಆಗದ ಅಣ್ಣತಮ್ಮಂದಿರು ಇವರನ್ನೆಲ್ಲ ಒಳಗೊಂಡಿರುತ್ತದೆ.

**5. ಸಹಕಾರಿಗೆ ಮಾಹಿತಿ ಹಕ್ಕು ಅಧಿನಿಯಮ, 2005 ಅನ್ವಯವಾಗುತ್ತದೆಯೇ?**

**ಉತ್ತರ** : ಮಾಹಿತಿ ಹಕ್ಕು ಅಧಿನಿಯಮ, 2005 'ಸಾರ್ವಜನಿಕ ಪ್ರಾಧಿಕಾರ'ಗಳಿಗೆ ಅನ್ವಯಿಸುತ್ತದೆ ಮತ್ತು ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಮೇಲ್ಮನವಿ ಸಂಖ್ಯೆ : 9017/2013 ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ಸರ್ಕಾರದಿಂದ ಗಣನೀಯ ಪ್ರಮಾಣದ ಸಹಾಯಧನ ಪಡೆದುಕೊಂಡಿದ್ದಲ್ಲಿ ಅಥವಾ ಸರ್ಕಾರವು ಅಂತಹ ಪ್ರಾಧಿಕಾರದ ಆಡಳಿತದಲ್ಲಿ ಭಾಗವಹಿಸಿದ್ದಲ್ಲಿ ಅಥವಾ ಪಾಲು ಇದ್ದಲ್ಲಿ ಅದನ್ನು ಸಾರ್ವಜನಿಕ ಪ್ರಾಧಿಕಾರವೆಂದು ನಿರ್ಧರಿಸಲಾಗುತ್ತದೆ ಎಂದು ತಿಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ನೋಂದಣಿ ಹೊಂದಿರುವ ಒಂದು ಸಹಕಾರಿಯಾಗಿರುವುದರಿಂದ ಮತ್ತು ಸಹಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 17ರನ್ವಯ ಸರ್ಕಾರದ ಶೇರು, ಸರ್ಕಾರದ ಖಾತರಿಯಿಂದ ಸಾಲ, ಸಹಾಯ ಧನ, ಸಬ್ಸಿಡಿ ಪಡೆಯಲು ಅವಕಾಶವಿರುವುದಿಲ್ಲವಾದ ಕಾರಣ. ಸಹಕಾರಿಯು 'ಸಾರ್ವಜನಿಕ ಪ್ರಾಧಿಕಾರ'ವಾಗಿರುವುದಿಲ್ಲವಾದ ಕಾರಣ ಮಾಹಿತಿ ಹಕ್ಕು ಅಧಿನಿಯಮ, 2005 ಅನ್ವಯಿಸುವುದಿಲ್ಲ. ■

# ಗ್ರಾಮೀಣ ಅಭಿವೃದ್ಧಿಯಲ್ಲಿ ಸಹಕಾರಿಗಳ ಪಾತ್ರ

▸▸ ಶ್ರೀ ಹೆಚ್.ರಾಜಶೇಖರ, ಕಿರಿಯ ಅಧಿಕಾರಿ, ಕರಾಸೌಸಂಸನಿ., ಕಲಬುರಗಿ ವಿಭಾಗ.

ಭಾರತ ದೇಶವು ಹಳ್ಳಿಗಳಿಂದ ಕೂಡಿದ, ಕೃಷಿ ಆಧಾರಿತ ಒಂದು ಸಾಂಸ್ಕೃತಿಕ ದೇಶ. ಇಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಹಳ್ಳಿಗಳಲ್ಲಿ ನೆಲೆಸಿದ್ದಾರೆ. ದೇಶದ ಆರ್ಥಿಕ ಪ್ರಗತಿಯಲ್ಲಿ ಗ್ರಾಮೀಣ ವಲಯದ ಕೊಡುಗೆ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ, ಹಳ್ಳಿಗಳ ಅಭಿವೃದ್ಧಿ ಕೊರತೆಯು ಭಾರತದ ಅಭಿವೃದ್ಧಿಯ ಕೊರತೆ ಎಂದರ್ಥ.

ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳು ಹೆಚ್ಚು ಗ್ರಾಮೀಣ ಭಾಗದಲ್ಲಿ ಆರ್ಥಿಕ ಸುಧಾರಣೆಗೆ ಶ್ರಮಿಸುತ್ತಿವೆ. ಭಾರತದಲ್ಲಿ ಶೇಕಡ 97ರಷ್ಟು ಹಳ್ಳಿಗಳಲ್ಲಿ ಸಹಕಾರ ಕ್ಷೇತ್ರ ತಲುಪಿದೆ, ಇದರಲ್ಲಿ ಕೆಲವೊಂದು ಸದಸ್ಯರಿಂದ ನಡೆಸಲ್ಪಟ್ಟಿವೆ ಹಾಗೂ ಕೆಲವೊಂದು ಸರ್ಕಾರಗಳಿಂದ ನಡೆಸಲ್ಪಟ್ಟಿವೆ.

ಪಾಲುದಾರಿಕೆ ಸಂಸ್ಥೆಗಳು, ಕಂಪನಿಗಳು ಮತ್ತು ಚಾರಿಟೇಬಲ್ ಟ್ರಸ್ಟ್ ಸೇರಿದಂತೆ ಸಹಕಾರಿ ಸಂಸ್ಥೆಗಳು ವಿವಿಧ ರೀತಿಯಲ್ಲಿ ಸೇವೆ ನೀಡುವುದರ ಮೂಲಕ ಗ್ರಾಮೀಣ ಭಾಗದ ಜನರ ಅಗತ್ಯತೆಗಳನ್ನು ಪೂರೈಸುತ್ತಿವೆ. ಸರ್ಕಾರಗಳು ಪ್ರತಿ ವರ್ಷ ಗ್ರಾಮೀಣ ಅಭಿವೃದ್ಧಿಗಾಗಿ ಸಾವಿರಾರು ಕೋಟಿಗಳಷ್ಟು ವ್ಯಯಿಸುತ್ತಿವೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿಗಳ ಕೆಲಸ ಗಮನಾರ್ಹವಾದದ್ದು.

"ತಾನು ಎಲ್ಲಗಾಗಿ, ಎಲ್ಲರೂ ತನಗಾಗಿ" ಎಂಬ ಮೂಲತತ್ವದೊಂದಿಗೆ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇದಕ್ಕೆ ದೇಶದಲ್ಲಿ ಹಸಿರು ಕ್ರಾಂತಿಗೆ ಕಾರಣೀಕರ್ತವಾಗಿರುವ ಕೃಷಿ ಪತ್ತಿನ ಸಹಕಾರ ಸಂಘಗಳು, ಶ್ವೇತ ಕ್ರಾಂತಿಗೆ ಕಾರಣೀಕರ್ತರಾಗಿರುವ ಗುಜರಾತ್‌ನ ಸಹಕಾರಿ ಡೈರಿಗಳು ಮತ್ತು ಮಹಾರಾಷ್ಟ್ರದ ಸಕ್ಕರೆ ಸಹಕಾರಿ ಕಾರ್ಖಾನೆಗಳು ಹೀಗೆ ಗ್ರಾಮೀಣ ಜೀವನದ ಎಲ್ಲಾ ರಂಗಗಳಲ್ಲಿ ಈ ಕ್ಷೇತ್ರ ನೀಡಿರುವ ಕೊಡುಗೆಯೇ ಒಂದು ಉತ್ತಮ ನಿದರ್ಶನ.

ಸಹಕಾರ ಚಳುವಳಿಯು ಪಶ್ಚಿಮದಲ್ಲಿ ಕಳೆದ ಶತಮಾನದ ಮಧ್ಯ ಭಾಗದ ಅವಧಿಯಲ್ಲಿ ಆರಂಭಗೊಂಡು, ಅಲ್ಲಿಂದ ಭಾರತಕ್ಕೆ ಪ್ರಭಾವ ಬೀರಿದೆ. 1904 ಮಾರ್ಚ್ 25ರಂದು ಸಹಕಾರಿ ಪತ್ತಿನ ಕಾಯಿದೆ ಜಾರಿಗೆ ಬಂದ ನಂತರ, ಭಾರತದಲ್ಲಿ ಸಹಕಾರ ಸಂಘಗಳು ಪ್ರಾರಂಭಗೊಂಡವು. ಇದರ ಪೂರ್ವದಲ್ಲಿ ಹಳ್ಳಿಗಳು ಸಾಲದ ದೋಣಿಯಲ್ಲಿ ಮುಂದುವರೆದಿದ್ದವು. ಈ ಒಂದು ಕಾರಣದಿಂದ ಚಿಟ್‌ಫಂಡ್ ಮತ್ತು ಸಹಕಾರಿಗಳು ಪ್ರಾರಂಭಿಸುವುದಕ್ಕೆ ನಾಂದಿಯಾಯಿತು. ಆರಂಭದಲ್ಲಿ ಸಾಲಗಳು ಪತ್ತಿನ ಸಹಕಾರಿ ಸಂಘಗಳ ಮೂಲಕ ಕೇವಲ ರೈತರಿಗೆ ನೀಡಿದವು. ಕ್ರಮೇಣ ಇವು ಬ್ಯಾಂಕಿಂಗ್, ಸಂಸ್ಕರಣ ಮತ್ತು ಮಾರುಕಟ್ಟೆ ಇತರೆ ಕ್ಷೇತ್ರಗಳಲ್ಲಿ ಕೆಲಸ ಆರಂಭಿಸಿದವು. ರೈತರು ತಮ್ಮ ಆರ್ಥಿಕ ಸಮಸ್ಯೆಗಳನ್ನು ತಮ್ಮ ಅತ್ಯಲ್ಪ ಬಂಡವಾಳದಿಂದ ನಡೆಸುತ್ತಿದ್ದ ಸಹಕಾರಿಗಳ ಮೂಲಕ ನಿವಾರಿಸಿಕೊಳ್ಳಲು ಇದು ಒಂದು ಆಕರ್ಷಕ ಮಾರ್ಗವಾಗಿತ್ತು.

ಸ್ವಾತಂತ್ರ್ಯನಂತರ ಸಹಕಾರಿ ಸಂಘಗಳು ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯಲ್ಲಿ ಮತ್ತು ಬಡತನ ನಿರ್ಮೂಲನೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಇದರೊಂದಿಗೆ ಸಹಕಾರ ಕ್ಷೇತ್ರವು ಪಂಚವಾರ್ಷಿಕ ಯೋಜನೆಯ ಅವಿಭಾಜ್ಯ ಅಂಗವಾಯಿತು. ಅಲ್ಲದೇ, ಇದು ದೇಶದ ಅರ್ಥವ್ಯವಸ್ಥೆಯಲ್ಲಿ ಮೂಲಭೂತ ಅಂಶವಾಯಿತು. ಸರ್ಕಾರವು 1912ರಲ್ಲಿ ಸಹಕಾರಿ ಕಾಯಿದೆಗೆ ತಿದ್ದುಪಡಿ ತಂದು ಪತ್ತೇತರ ಸಹಕಾರಿಗಳನ್ನು ಆರಂಭಿಸಲು ಅನುವು ಮಾಡಿಕೊಟ್ಟಿತು. ಅಲ್ಲದೇ, 1928ರಲ್ಲಿ ಕೃಷಿಗಾಗಿ ನಿಯೋಜಿಸಿದ್ದ ರಾಯಲ್ ಕಮೀಷನ್ ತನ್ನ ವರದಿಯಲ್ಲಿ ಸಹಕಾರಿ ಕ್ಷೇತ್ರದ ಪ್ರಾಮುಖ್ಯತೆಯ ಬಗ್ಗೆ ಉಲ್ಲೇಖಿಸಿತು.

1935ರಲ್ಲಿ ರಿಸರ್ವ್ ಬ್ಯಾಂಕ್ ಸ್ಥಾಪಿಸುವುದರೊಂದಿಗೆ ಸಹಕಾರಿಗಳ ಬೆಳವಣಿಗೆಗೆ ಹೆಚ್ಚು ಹೊತ್ತು ನೀಡಲಾಯಿತು. ಸಹಕಾರಿಗಳ ಉದ್ದೇಶವು ಸಾಲದಾತರ ಹಿಡಿತದಿಂದ, ಬಡತನದಿಂದ ರೈತರನ್ನು ಮುಕ್ತ ಮಾಡುವುದಾಗಿತ್ತು. ಸಹಕಾರಿಗಳು ಅತಿ ಕಡಿಮೆ ಸಮಯದಲ್ಲಿ ಕೃಷಿ ಕ್ಷೇತ್ರದೊಂದಿಗೆ ಉತ್ಪಾದನೆ, ಮಾರುಕಟ್ಟೆ ಮತ್ತು ಸಂಸ್ಕರಣ ಹಾಗೂ ಇತರೆ ಕ್ಷೇತ್ರಗಳಿಗೂ ಹಬ್ಬಿಕೊಂಡಿತು. 1951ರಲ್ಲಿ ಭಾರತದಲ್ಲಿ ಅತೀ ಕಡಿಮೆ ಅವಧಿಯಲ್ಲಿ 1,81,000 ವಿವಿಧ ರೀತಿಯ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು, ಅದೇರೀತಿಯಾಗಿ 2007–08ರ ಅವಧಿಯಲ್ಲಿ 1,50,000 ಪತ್ತಿನ ಸಹಕಾರಿ ಸಂಘಗಳು, 2,60,000 ಇತರೆ ಸಹಕಾರಿ ಸಂಘಗಳು ಸದಸ್ಯರ ಸೇವೆಯಲ್ಲಿದ್ದವು.

ಸಹಕಾರಿಗಳ ವಿಸ್ತರಣೆ ಮತ್ತು ವ್ಯಾಪ್ತಿಯು ಹೆಚ್ಚು ಪರಿಣಾಮಕಾರಿ ಯಾಗಿದ್ದು, ಆದರೆ ಸಹಕಾರಿಗಳು ಸಾಗಿರುವ ಹಾದಿಯಲ್ಲಿ ಕೆಲವು ಸಹಕಾರಿಗಳನ್ನು ಹೊರತುಪಡಿಸಿ, ಬಹುತೇಕ ಸಹಕಾರಿಗಳಲ್ಲಿ ಪ್ರೇರಣೆಯ ಕೊರತೆ ಇದೆ. ಇನ್ನೂ ಕೆಲವು ಪ್ರೇರಣೆ ಮತ್ತು ಸದಸ್ಯರ ಉತ್ಸಾಹ ಇಲ್ಲದೇ ಸರ್ಕಾರದಿಂದ ನಡೆಸಲ್ಪಟ್ಟಿದೆ. ಇನ್ನೂ ಕೆಲವು ಅಗತ್ಯವಾದ ನಿಧಿಗಳ ಕೊರತೆಯಿಂದ ಬಳಲುತ್ತಿವೆ. ಇದಲ್ಲದೇ ಸಹಕಾರಿಗಳ ಬೆಳವಣಿಗೆಗೆ ಮಂದಗತಿಗೊಳಿಸಲು ಕಾರಣವಾದ ಇತರೆ ಅಂಶಗಳು ಉತ್ತಮ ಆಡಳಿತ ವ್ಯವಸ್ಥೆಯ ಕೊರತೆ, ಕೌಶಲ್ಯ ಮತ್ತು ಜ್ಞಾನದ ಕೊರತೆ, ನಿರ್ಬಂಧಿತ ವ್ಯಾಪ್ತಿ ಮತ್ತು ರಾಜಕೀಯ ಹಸ್ತಕ್ಷೇಪ (Political Intervention) ಇವು ಯಾವುವು ಸಹಕಾರ ಕ್ಷೇತ್ರಕ್ಕೆ ಹಿನ್ನೆಡೆ ಮಾಡಿಲ್ಲ. ಇವುಗಳ ಹೊರತಾಗಿಯೂ, ಸಹಕಾರಿಗಳು ನಿಜವಾಗಿಯೂ ಬಡವರು, ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ನೆರವಾಗುತ್ತಿವೆ. ಸಹಕಾರಿ ಸಂಸ್ಥೆಗಳು ಕೃಷಿ ಆಧಾರಿತ ಸಾಲಗಳನ್ನು ಸರಳ ರೀತಿಯಲ್ಲಿ ಒದಗಿಸುತ್ತಿವೆ ಹಾಗೂ ನ್ಯಾಯ ಬೆಲೆ ಅಂಗಡಿಗಳು ಆಹಾರ ಧಾನ್ಯಗಳನ್ನು ಪೂರೈಸುವುದರೊಂದಿಗೆ ಕಡುಬಡವರಿಗೆ ಅಕ್ಷಯ ಪಾತ್ರೆಯಾಗಿವೆ. ನ್ಯಾಯಯುತ ಬೆಲೆಯಲ್ಲಿ ಕೀಟನಾಶಕ, ರಸಗೊಬ್ಬರ ನೀಡುವುದರೊಂದಿಗೆ ರೈತರಿಗೆ ಸಹಾಯಕವಾಗಿವೆ ಮತ್ತು ಸಹಕಾರಿಗಳ ವ್ಯಾಪ್ತಿಯಲ್ಲಿ ಮಹಿಳೆಯರನ್ನು ತೊಡಗಿಸುವುದರ ಮೂಲಕ ಗ್ರಾಮೀಣ ಅಭಿವೃದ್ಧಿಯೊಂದಿಗೆ ಮಹಿಳಾ ಸಬಲೀಕರಣಕ್ಕೆ ಪೂರಕ ವಾತಾವರಣವನ್ನು ಸಹಕಾರಿ ಕ್ಷೇತ್ರವು ಸೃಷ್ಟಿಸಿರುವುದು ಶ್ಲಾಘನೀಯ. ■

# ಸೌಹಾರ್ದ ಸಹಕಾರಿಗಳು – ಸಹಕಾರ ಕ್ಷೇತ್ರಕ್ಕೆ ನವಚೈತನ್ಯ ನೀಡುವ ರೂವಾರಿಗಳು

ಶ್ರೀ ಎಂ.ಎನ್.ಸುಂದರ ರಾಜ್, ಅಧ್ಯಕ್ಷರು, ಕಲಾವಿದರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ.

ನಮ್ಮ ದೇಶ ಸಹಕಾರಿ ಚಳುವಳಿಯ ವಿಷಯದಲ್ಲಿ ತುಂಬ ಅದೃಷ್ಟ ಪಡೆದಿದೆ. ಅದರಲ್ಲಿಯೂ ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಚಳುವಳಿಯು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಕಂಡ ಇತರ ರಾಜ್ಯಗಳು ಹುಬ್ಬೇರಿಸಿವೆ. ಯಾವುದೇ ಒಬ್ಬ ವ್ಯಕ್ತಿ ಸಹಕಾರವಿಲ್ಲದೇ ಮುಂದೆ ಬರಲು ಸಾಧ್ಯವಿಲ್ಲ. ಜನ್ಮದಿಂದ ಸಾಯುವವರೆಗೂ ಮಾನವ ಸಹಕಾರ ಜೀವಿಯಾಗಿಯೇ ಬದುಕುತ್ತಾನೆ. ಆಹಾರ, ಆಶ್ರಯ, ಕಲಿಕೆ, ಬೋಧನೆ, ಪ್ರತಿಯೊಂದರಲ್ಲಿಯೂ ನಾವು ಸಹಕಾರಿ ತತ್ವವನ್ನು ಕಾಣುತ್ತೇವೆ.

ಸಮಾಜವೆಂಬುದು ಸಂಘರ್ಷ ದಾಟಿದ ಸಹಕಾರ ಎಂದು ಮ್ಯಾಕ್ಲೆವರ್ ಮತ್ತು ಪೇಜ್ ಒಂದೆಡೆ ಹೇಳಿದ್ದಾರೆ. ಸಹಕಾರ ತತ್ವವಿದ್ದಲ್ಲಿ ಎಂತಹ ಪರಿಸ್ಥಿತಿಯಲ್ಲಿಯೂ ಸರಾಗವಾಗಿ ಸಾಗಲು ಸಾಧ್ಯವೆಂಬುದು ಪರಿಣಿತರ ಅಭಿಪ್ರಾಯ. ಇಂತಹ ಸಹಕಾರದಿಂದಾಗಿ ನಾವಿಂದು ಅನೇಕ ಸಾಧನೆಗಳನ್ನು ಕಾಣುವಂತಾಗಿದೆ. ಕರ್ನಾಟಕದಲ್ಲೀಗ ಸುಮಾರು 3075ಕ್ಕೂ ಹೆಚ್ಚು ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ಸೌಹಾರ್ದ ಚಳುವಳಿಗೀಗ 15ರ ಹರೆಯ. ಪ್ರತಿವರ್ಷ ಜನವರಿ ಒಂದನೇ ದಿನಾಂಕದಂದು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಹೊಸ ಅಲೆಯನ್ನು ಬೀಸುತ್ತಿರುವ ಸೌಹಾರ್ದ ಸಹಕಾರಿ ಚಳುವಳಿಯಿಂದ ಲಾಭಗಳೇನು ಎಂಬುದನ್ನು ಗಮನಿಸೋಣ.

### 1. ಆರ್ಥಿಕ ಲಾಭಗಳು :

ಅ. ಇಂದಿನ ದಿನಗಳಲ್ಲಿ ಹೆಚ್ಚಿನ ಬಡ್ಡಿ ಪಡೆಯುವ ಲೇವಾದೇವಿ ಗಾರರಿಂದ ರೈತ ಕಂಗಾಲಾಗಿ ಆತ್ಮಹತ್ಯೆಯಂತಹ ಪರಿಸ್ಥಿತಿ ತಲೆದೋರಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಪ್ರತಿದಿನ ಪತ್ರಿಕೆಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನೋಡಿದರೆ ರೈತನ ಆರ್ಥಿಕ ಪರಿಸ್ಥಿತಿಯನ್ನು ತಿಳಿಯಬಹುದಾಗಿದೆ. ಆದರೆ ಸೌಹಾರ್ದ ಸಹಕಾರಿಗಳು ನೀಡುವ ಸುಲಭ ಬಡ್ಡಿ ದರದ ಸಾಲಗಳು ಆರ್ಥಿಕವಾಗಿ ಹಿಂದುಳಿದ ಜನರನ್ನು ದುಷ್ಟ ಲೇವಾದೇವಿಯವರ ಕೈಯಿಂದ ಪಾರು ಮಾಡಿ ಸ್ವಾಭಿಮಾನದಿಂದ ಬದುಕಲು ನೆರವಾಗುತ್ತವೆ. ಅಲ್ಲದೇ, ಖಾಸಗಿ ಲೇವಾದೇವಿ ಮಾಡುವವರೂ ಸಹ ತಮ್ಮ ಉಳಿವಿಗಾಗಿ ಬಡ್ಡಿದರವನ್ನು ಕಡಿಮೆ ಮಾಡಲು ನೆರವಾಗುತ್ತದೆ.

ಬ. ಸೌಹಾರ್ದ ಸಹಕಾರಿಗಳು ಜನರಲ್ಲಿ ಉಳಿತಾಯದ ಮನೋ ಭಾವನೆಯನ್ನು ಬೆಳೆಸುತ್ತವೆ. ಹೀಗೆ ಜನ ಉಳಿಸಿದ ಹಣವನ್ನು ಸಹಕಾರಿಯ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಸಹಕಾರಿಯ ಬೆಳವಣಿಗೆಗೆ ಬಳಸಿಕೊಳ್ಳಬಹುದಾಗಿದೆ. ಅಲ್ಲದೇ, ಉಳಿಸಿದ ಹಣಕ್ಕೆ ಹೆಚ್ಚಿನ ಬಡ್ಡಿಯೂ ದೊರೆಯುವುದರಿಂದ ಅದು ಆಪತ್ಕಾಲಕ್ಕೆ ನೆರವಾಗುತ್ತದೆ.

ಕ. ಸೌಹಾರ್ದ ಸಹಕಾರಿಗಳ ಬೆಳವಣಿಗೆಯಿಂದ ನಿರುದ್ಯೋಗ ಸಮಸ್ಯೆ ಸಹ ಬಗೆಹರಿಯಲು ನೆರವಾಗುತ್ತದೆ. ಒಂದು ಸಮುದಾಯಕ್ಕೆ, ಉದ್ಯೋಗಕ್ಕೆ, ಮನೋಭಾವಕ್ಕೆ, ಗುಂಪಿಗೆ ಸೇರಿದ ವ್ಯಕ್ತಿಗಳಿಂದ ತಮ್ಮ ವಲಯದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕುವುದಲ್ಲದೇ ಅನೇಕ ತರುಣರಿಗೆ ಉದ್ಯೋಗ ದೊರೆತು ತಮ್ಮ ಪ್ರತಿಭೆಯನ್ನು ಬೆಳಗಿಸಲು ನೆರವಾಗುತ್ತದೆ.

ಡ. ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರ ಕ್ಷೇಮಾಭಿವೃದ್ಧಿ ಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಎಲ್ಲ ರೀತಿಯ ಪ್ರೋತ್ಸಾಹವನ್ನು ನೀಡುತ್ತಿರುವುದರಿಂದ ಸಹಕಾರ ಚಳುವಳಿ ತೀವ್ರಗತಿಯಲ್ಲಿ ಪಸರಿಸಲು ಸಾಧ್ಯವಾಗುತ್ತದೆ.

### 2. ಸಾಮಾಜಿಕ ಲಾಭಗಳು

ಅ. ಸೌಹಾರ್ದ ಸಹಕಾರಿ ಸಂಸ್ಥೆಗಳು ತನ್ನ ಸದಸ್ಯರು ಸಾಮಾಜಿಕ ಪಿಡುಗಗಳಾದ ಕುಡಿತ, ಜೂಜು, ಮಾದಕದ್ರವ್ಯ ಸೇವನೆ ಮುಂತಾದವು ಗಳನ್ನು ಬಿಟ್ಟುಬಿಡಲು ನೆರವಾಗಿವೆ. ಅಲ್ಲದೇ ವಿವಾಹ, ಧಾರ್ಮಿಕ ಕಾರ್ಯಗಳು ಮುಂತಾದ ಕೆಲಸಗಳಲ್ಲಿ ವೃಥಾ ವ್ಯರ್ಥವಾಗುವ ಹಣದ ಬಗ್ಗೆಯೂ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಅನೇಕ ಸಂದರ್ಭಗಳಲ್ಲಿ ಸದಸ್ಯರು ಕೆಲವು ವಿವಾದಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಪ್ರೋತ್ಸಾಹಿಸುವುದರಿಂದ ಕೋರ್ಟು ಕಛೇರಿಗಳಿಗೆ ವ್ಯಯಮಾಡುವ ಹಣವನ್ನು ಉಳಿಸಿದಂತಾಗುತ್ತದೆ.

ಬ. ಸೌಹಾರ್ದ ಸಹಕಾರಿಗಳು ಕೈಗೊಳ್ಳುವ ಅನೇಕ ಕಲ್ಯಾಣ ಕಾರ್ಯಕ್ರಮ ಗಳು ಸಹಕಾರ ಸಂಘದ ಸದಸ್ಯರಿಗೆ ನೇರವಾಗಿ ತಲುಪಬಲ್ಲವು. ಉದಾಹರಣೆಗೆ ಶುದ್ಧ ಕುಡಿಯುವ ನೀರನ್ನೊದಗಿಸು ವುದು, ವೈದ್ಯಕೀಯ ತಪಾಸಣಾ ಶಿಬಿರಗಳನ್ನೇ ರ್ಪಡಿಸುವುದು, ಯಶಸ್ವಿನಿ ಕಾರ್ಯಕ್ರಮ, ಕುಟುಂಬ ಕಲ್ಯಾಣ ನಿಧಿ ಸ್ಥಾಪನೆ, ಸದಸ್ಯರ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುವುದು – ಇವೆಲ್ಲ ಒಂದಲ್ಲಾ ಒಂದು ರೀತಿಯಿಂದ ನೆರವಾಗುವಂತಹವೇ.

ಕ. ಸೌಹಾರ್ದ ಸಹಕಾರಿ ತತ್ವಗಳು ಸಹ ಸದಸ್ಯರಿಗೆ ಒಟ್ಟಿಗೆ ಬದುಕುವ ಕಲೆಯನ್ನು ಕಲಿಸಿಕೊಡುತ್ತದೆ. 'ಎಲ್ಲರೂ ತನಗಾಗಿ ತಾನು ಎಲ್ಲರಿಗಾಗಿ' ತತ್ವವನ್ನು ಅನುಸರಿಸಲು ಉತ್ತೇಜಿಸುವುದು.

ಡ. ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಗೆ ಸ್ವಾವಲಂಬನ ಪ್ರವೃತ್ತಿಯನ್ನು ಬೆಳೆಸುತ್ತದೆ. ಎಲ್ಲರೂ ಒಗ್ಗಟ್ಟಾಗಿ ದುಡಿದರೆ ಏನು ಬೇಕಾದರೂ ಸಾಧನೆ ಮಾಡಬಹುದೆಂಬ ಸಾಮಾನ್ಯ ಜ್ಞಾನವನ್ನು ಸದಸ್ಯರಲ್ಲಿ ಬೆಳೆಸುತ್ತದೆ.

ಪ. ಸದಸ್ಯರೆಲ್ಲರೂ ಸೇರಿ ಒಟ್ಟಿಗೆ ಕಲೆತು ಯಾವುದೇ ವಿಷಯದ ಕುರಿತಾಗಲೀ, ಯಾವುದೇ ನಿರ್ಧಾರವಾಗಲೀ ಕೈಗೊಳ್ಳುವುದರಿಂದ ಅಧಿಕಾರಿಶಾಹಿ ಪ್ರವೃತ್ತಿಯನ್ನು ಹತ್ತಿಕ್ಕುತ್ತದೆ.

### 3. ಶೈಕ್ಷಣಿಕ ಲಾಭಗಳು :

ಸೌಹಾರ್ದ ಸಹಕಾರಿಗಳು ಸಂಸ್ಥೆಯಲ್ಲಿ ವ್ಯವಹರಿಸುವಾಗ ಅನೇಕ ವಿಷಯಗಳನ್ನು ಕಲಿಯುತ್ತಾರೆ. ಸೌಹಾರ್ದದ ಅವಶ್ಯಕತೆ, ಚುನಾವಣಾ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆ, ಸಭೆಗಳಲ್ಲಿ ನಡೆದುಕೊಳ್ಳುವ ರೀತಿ ಮುಂತಾದ ವಿಷಯಗಳಿಗೆ ತಮಗೆ ಗೊತ್ತಾಗದಂತೆ ಶಿಕ್ಷಣ ಪಡೆಯುವರು. ಇದರಿಂದ ಅನೇಕ ಗೊಂದಲಗಳು ಬಗೆಹರಿದು, ಸ್ನೇಹ, ಪ್ರೀತಿ ಮತ್ತು ಪ್ರಶ್ನಿಸುವ ಮನೋಭಾವ ಬೆಳೆಯುತ್ತದೆ.

# Stop Violence Against Women (VAW)

**Dr. U.Homiga,** Faculty member, Regional Institute of Cooperative Management, Bangalore.

**ದಿನಾಂಕ 7 ಮತ್ತು 08 ಜುಲೈ 2015ರಂದು ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ ಏರ್ಪಡಿಸಲಾಗಿದ್ದ 2 ದಿನಗಳ 'ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ'ದ ಸಂದರ್ಭದಲ್ಲಿ ಮಹಿಳಾ ಸಬಲೀಕರಣ ಕುರಿತಂತೆ ಪ್ರಥಮ ಹೆಜ್ಜೆಯಾಗಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಸಂಬಂಧಿಸಿದ ವಿಶೇಷ ಲೇಖನ.**

From the dawn of time it seems that humans have always found reasons to fight with each other. We have waged war over water, land, diamonds, oil, religion, skin color, or one man's simple desire to rule the world. This tradition of aggression has kept us busy. There have been people to bury, cities to rebuild, orphans to care for, and refugees to rehabilitate. However, this has been the less difficult work. The much more challenging task has been to learn war's greatest lesson, "It isn't worth the trouble." There are those who would argue that sometimes war is justified, but what justifies women being systematically raped, sexually abused and purposely infected with HIV? What justifies the acid attacking on women? What justifies a three year old female child being raped?

Violence Against Women (VAW) is a violation of their human rights which includes trafficking in women and girls, rape, wife abuse, sexual abuse of children and harmful practices and traditions that irreparably damage girls' and women's health. In addition, the social consequences of violence against women are staggering. Violence Against Women (VAW) is a public health emergency and a major cause of death and disability for women of all ages. It has been estimated that violence against women is as serious a cause of death and incapacity among women of reproductive age as cancer, and a greater cause of ill health than traffic accidents and epidemic diseases combined.

Violence against women and girls is rooted in gender-based discrimination, social norms and gender stereotypes that perpetuate such violence. Given the devastating effect violence has on women, efforts have mainly focused on responses and services for survivors. However, the best way to end Violence against women and girls is to prevent it from happening in the first place by addressing its root and structural causes. Prevention should start early in life, by educating and working with young boys and girls promoting respectful relationships and gender equality. A strong focus on prevention through the promotion of gender equality, women's empowerment and their enjoyment of human rights is the need of the hour. It means making the home and public spaces safer for women and girls. It means ensuring women's economic autonomy and security. It means increasing women's participation and decision-making powers—in the home and relationships, as well as in public life and politics. Working with men and boys helps accelerate progress in preventing and ending violence against women and girls. They can begin to challenge the deeply rooted inequalities and social norms that perpetuate men's control and power over women and reinforce tolerance for violence against women and girls. Awareness-raising and community mobilization through media is another important component of an effective prevention strategy.

As women we reject the label of victim and recognize that living with challenges makes us the best qualified to lead change and provide solutions for those situations. We are change agents and our leadership can bring vitality, creativity and courage for social change. We have the power to inspire and mobilize others for positive action. We can encourage the questioning of systems and beliefs that limit our lives and choices.

With courage we can confront even the injustices that have been in place long before our lives began. By our leadership, women ensure that social change happens, but only when peace, justice, health, human dignity and care for the environment has been achieved everywhere, and for everyone without any gender bias.

By supporting each other we ensure that our leadership remains strong in the face of unfair gender biases and maximize our power to change. By working together, we can help each other grow, maximize our strengths and fulfill our potential as change makers. One woman brings hope to her family; many women bring hope to humanity. Providing equal access to education, credit, property and employment for women along with safe and healthy minds around will certainly ensure socio-economic justice and sustainability for all. ■

---

ಹಿಂದಿನ ಪುಟದಿಂದ...

**4. ರಾಜಕೀಯ ಲಾಭಗಳು :**

ಸದಸ್ಯರೆಲ್ಲ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ, ಚುನಾವಣೆಗಳಲ್ಲಿ ಭಾಗವಹಿಸುವುದರಿಂದ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯನ್ನು ಬಲಪಡಿಸಿ ಕೊಳ್ಳಲು ನೆರವಾಗುತ್ತದೆ. ಇಷ್ಟೆಲ್ಲ ಅನುಕೂಲತೆಗಳು ಸೌಹಾರ್ದ ಸಹಕಾರ ಸಂಸ್ಥೆಯಿಂದ ದೊರೆಯುವುದರಿಂದ ಸಹಜವಾಗಿ ಸಮಾಜದ ಅಲಕ್ಷಿತ ಸಮುದಾಯ ದವರು ತಮ್ಮದೇ ಆದ ಸೌಹಾರ್ದಗಳನ್ನು ಸ್ಥಾಪಿಸಿಕೊಂಡು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ನೆರವಾಗುತ್ತದೆ. ಹೀಗಾಗಿ ಅಸಂಘಟಿತ ಕಾರ್ಮಿಕರು, ಕಲಾವಿದರು, ವಿವಿಧ ವೃತ್ತಿಯನ್ನು ಕೈಗೊಂಡಿರುವವರು ಸಂಘಟಿತರಾಗಿ ಚಟುವಟಿಕೆಗಳನ್ನು ನಡೆಸಲು ಮತ್ತು ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಸಹಕಾರ ಕ್ಷೇತ್ರ ಎಲ್ಲ ರೀತಿಯ ನೆರವನ್ನೂ, ಪ್ರೋತ್ಸಾಹವನ್ನೂ ನೀಡುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯ ತಳಹದಿಯ ಮೇಲೆ ನಿಂತಿರುವ ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಎಲ್ಲರಿಗೂ ಸಮಾನ ಅವಕಾಶ ನೀಡುವುದರಿಂದ ವ್ಯಕ್ತಿಯ ಪ್ರತಿಭಾ ವಿಕಾಸಕ್ಕೂ ನೆರವಾಗುತ್ತದೆ. ಆದ್ದರಿಂದ ನಮ್ಮೆಲ್ಲ ಸಹಕಾರಿ ಬಂಧುಗಳು ಪ್ರಾಮಾಣಿಕವಾಗಿ ಮತ್ತು ಬದ್ಧತೆಯಿಂದ ಕೆಲಸ ನಿರ್ವಹಿಸಿದರೆ ಖಂಡಿತಾ ಉತ್ತಮ ಫಲಗಳನ್ನು ನಿರೀಕ್ಷೆ ಮಾಡಬಹುದಾಗಿದೆ. ■



# RBI NEWS - AUGUST 2015

K.Vittal Shetty

**Third Bi-monthly Monetary Policy Statement, 2015-16 was announced By Dr. Raghuram G. Rajan, Governor on 4th August 2015. All the policy rates remain unchanged. No changes in CRR & SLR.**

**The fourth bi-monthly monetary policy statement will be announced on September 29, 2015**

**August=19- RBI grants "in-principle" approval to 11 Applicants for Payments Banks**

The Reserve Bank of India has decided to grant "in-principle" approval to the following 11 applicants to set up payments banks under the Guidelines for Licensing of Payments Banks issued on November 27, 2014 (Guidelines).

1. Aditya Birla Nuvo Limited
2. Airtel M Commerce Services Limited
3. Cholamandalam Distribution Services Limited
4. Department of Posts
5. Fino PayTech Limited
6. National Securities Depository Limited
7. Reliance Industries Limited
8. Shri Dilip Shantilal Shanghvi
9. Shri Vijay Shekhar Sharma
10. Tech Mahindra Limited
11. Vodafone m-pesa Limited

**IMPORTANT NEWS - August = 20**

**CONVERSION OF UCBs into BANKS, SMALL FINANCE BANKS, ISSUE OF FRESH LICENCES & ENTRY POINT NORMS**

**The important recommendations made by the High Power Committee headed by Shri R Gandhi are briefly as under :**

**1. Business Size and Conversion of Multi-State UCBs into joint stock bank :** A business size of Rs. 20,000 crore or more may be the threshold limit beyond which a UCB may be expected to convert itself into a commercial bank. The conversion need not be de jure compulsory. However, the types of businesses to be undertaken by those choosing not to convert may remain within the limits of plain vanilla products and services and hence, growth will be at a much slower pace. Their expansion in terms of branches, area of operations and business lines may thus be carefully calibrated.

**2. Conversion of UCBs into Small Finance Banks (SFBs):** Smaller UCBs with business size of less than Rs. 20,000 crore willing to convert to SFBs can apply to the Reserve Bank for conversion provided they fulfil all the eligibility criteria and selection processes prescribed by the Reserve Bank and further provided that the licensing window for SFBs is open.

**3. Issue of fresh licences :** Licenses may be issued to financially sound and well-managed co-operative credit societies having a minimum track record of 5 years which satisfy the regulatory prescriptions set by the Reserve Bank as licensing conditions. For providing banking access in unbanked areas, the Reserve Bank may put in place an appropriate set of incentives for existing banks to open branches there.

**4. Board of Management (BoM) in addition to Board of Directors (BoDs) :** Putting in place a BoM as suggested by the Malegam Committee has to be one of the mandatory licensing conditions for licensing of new UCBs and expansion of existing ones.

**5. Entry Point Norms: The new Entry Point Norms (EPNs) may be as under :**

a. To operate as a Multi-State Urban Co-operative Bank- Rs. 100 crore

b. To operate beyond two districts and as a State level UCB - Rs. 50 crore

c. To operate as District level UCB (up to 2 districts) - Rs. 25 crore

d. In case of conversion of co-operative credit societies in unbanked areas and in the north-east, suitable relaxation may be made by the Reserve Bank.

**6. Depositors as voting members :** The depositors ought

**2ನೇ ಹಾಗೂ 4ನೇ ಶನಿವಾರ ಸಹಕಾರ ಬ್ಯಾಂಕುಗಳಿಗೆ ರಜೆ**

ಪ್ರತಿ ಮಾಹೆಯ 2ನೇ ಹಾಗೂ 4ನೇ ಶನಿವಾರಗಳಂದು ಸಹಕಾರ ಬ್ಯಾಂಕುಗಳು ಸೇರಿದಂತೆ ಉಳಿದ ಎಲ್ಲಾ ಬ್ಯಾಂಕುಗಳಿಗೂ ರಜೆ ಇರುತ್ತದೆ. ಈ ವ್ಯವಸ್ಥೆಯು ದಿನಾಂಕ : 01.09.2015 ರಿಂದ ಜಾರಿಗೆ ಬಂದಿರುತ್ತದೆ. ಈ ದಿನಗಳಂದು ಎನ್‌ಇಎಫ್‌ಟಿ, ಆರ್‌ಟಿಜಿಎಸ್ ಮುಂತಾದ ಹಣ ಪಾವತಿ ವ್ಯವಸ್ಥೆಗಳು ಹಾಗೂ ಚೆಕ್ ಕಲೆಕ್ಷನ್ ವ್ಯವಸ್ಥೆಯು ಕಾರ್ಯನಿರ್ವಹಿಸುವುದಿಲ್ಲ. ಉಳಿದ ಎಲ್ಲಾ ಶನಿವಾರಗಳಂದು ದಿನಪೂರ್ತಿ ಈ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತವೆ ಎಂದು ದಿನಾಂಕ 28.08.2015ರಂದು ಆರ್‌ಬಿಐ ಹೊರಡಿಸಿರುವ ಸುತ್ತೋಲೆಯಲ್ಲಿ ಪ್ರಕಟಿಸಲಾಗಿದೆ. ಈ ಸುತ್ತೋಲೆಯು ಬ್ಯಾಂಕುಗಳಿಗಲ್ಲದೇ ಬೇರೆ ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಈ ವಿಷಯವನ್ನು ಎಲ್ಲಾ ಸೌಹಾರ್ದ ಸಹಕಾರಿ ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28

to have a say on the Boards of UCBs. For this, a majority of the board seats may be reserved for depositors by making suitable provisions in the bye-laws.

Reserve Bank had announced the constitution of a High Powered Committee (HPC) under the Chairmanship of Shri R. Gandhi, Deputy Governor, RBI to examine and recommend permissible business lines and appropriate size, and examine the issues with regard to conversion of UCBs into commercial banks besides determining whether the time is opportune to issue new licenses to UCBs as recommended by the Expert Committee on Licensing of New UCBs (Malegam Committee).

The Reserve Bank of India placed on its website the Report of the High Powered Committee on Urban Co-operative Banks (UCBs) (Chairman: Shri R. Gandhi). Suggestions and comments on the Report may please be forwarded by September 18, 2015.

August=28-Bank Holiday on Second & Fourth Saturdays from September 1; RBI to offer its Support Services to Banks on Working Saturdays

All scheduled and non-scheduled banks – public, private, foreign, cooperative, regional rural and local area banks – will observe public holiday on second and fourth Saturdays from September 01, 2015; and will observe full working days on Saturdays other than second and fourth Saturdays It may be recalled that the Government of India issued a Notification on August 20, 2015 [published in the Gazette of India, Extra Ordinary, Part II, Section 3, Sub-Section (ii)] declaring every second and the fourth Saturday of every month as public holiday under Section 25 of the Negotiable Instruments Act, 1881 (26 of 1881). Accordingly, all banks whether or not included in the Second Schedule to the Reserve Bank of India Act, 1934 (2 of 1934) will observe holidays on second and fourth Saturdays with effect from September 1, 2015.

Withdrawl,Cancellation, Penalties and Directions on Urban Co-operative Banks

August-05-RBI imposes Monetary Penalty of Rs. 1.00 lakh (Rupees one lakh only) on Dausa Urban Co-operative Bank Limited, Dausa for the violations of the guidelines/ directives on KYC)/AML in respect of absence of system of risk categorization, fixation of threshold limits and putting in place appropriate software for generating alerts for identification of suspicious transactions.

August-06-RBI further extends Directions issued to Dilip Urban Co-operative Bank Ltd., Barshi, District - Solapur, Maharashtra .The validity has been extended for a further period of six months from the close of business on August 07, 2015 to February 06, 2016.

August-10-RBI imposes Monetary Penalty Rs. 5.00 lakh (Rupees Five Lakh) on Shri Yugprabhav Sahakari Bank Ltd., Vadodara (Gujarat) for violation of guidelines for submission of proper compliance of RBI Inspection Report 2013 and sustenance thereof, maintenance of minimum 25% of Net Demand and Time Liabilities (NDTL) in Government and other approved securities and Income Recognition & Assets Classification (IRAC) norms.

August-13- Shatabdi Mahila Sahakari Bank Ltd., Thane, District-Thane, Maharashtra was placed under directions by RBI The validity of the aforesaid directive extended for a further period of three months from the close of business on August 18, 2015 to November 17, 2015.

August-21- RBI further extends Directions issued to Rupee Co-operative Bank Ltd., Pune for a further period of six months from August 22, 2015 to February 21, 2016,

August-24- RBI imposes Monetary Penalty of Rs. 1.00 lakh (Rupees one lakh only ) on Khargone Nagrik Sahakari Bank Maryadit, Khargone for the violation of the directives/ guidelines on implementation of KYC)/AML norms, submission of proper compliance on time and granting donations.

August-24- RBI imposes Monetary Penalty of Rs. 5.00 lakh (Rupees five lakh only) on Krishna Mercantile Co-operative Bank Ltd., Bhopal for the violation of the directives/ guidelines on implementation of KYC/AML norms.

August-28-The Reserve Bank of India has withdrawn the All Inclusive Directions issued on September 12, 2012 to "The Janata Commercial Cooperative Bank Ltd., Khamgaon (Buldhana), Maharashtra" with effect from the close of business as on August 26, 2015. **Source: RBI Website**

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010